ದೂರವಾಣಿ ಸಂಖ್ಯೆ: 2419277/2419210
ಫ್ಯಾಕ್ಸ್: 0821-3419363/24193011

e-mail registrar@Uni-mysore-ac-
www.uni-mysore-ac-in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ.1/196/2024-25 ದಿನಾಂಕ 30-08-2025

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ,

ಮಾನ್ಯರೆ,

ದಿನಾಂಕ: 20.08.2025 ರಂದು ನಡೆದ ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡವಳಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ನಂಬುಗೆಯ,

R. Ravi

ಸಹಾಯಕ ಕುಲಸಚಿವ(ಪ್ರಾಧಿಕಾರ)

30/8

ಪ್ರತಿ:

1. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,
2. ನಿರ್ದೇಶಕರು, ಪಿ.ಎಂ.ಇ.ಬಿ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

} ನಡವಳಿಯನ್ನು ಲಗತ್ತಿಸಲಾಗಿದೆ.

# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 20-08-2025ರ ಬುಧವಾರ, ಪೂರ್ವಾಹ್ನ 11-00 ಗಂಟೆಗೆ ನಡೆದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ನಡಾವಳಿ.**

**<u>ಉಪಸ್ಥಿತರು:</u>**

1. ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀಮತಿ ಡಿ.ಎಸ್.ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. – ಸದಸ್ಯರು
3. ಪ್ರೊ. ಎಸ್.ಜೆ. ಮಂಜುನಾಥ್ – ಸದಸ್ಯರು
4. ಡಾ. ಟಿ.ಆರ್. ಚಂದ್ರಶೇಖರ್ – ಸದಸ್ಯರು
5. ಶ್ರೀ ಕೆ. ಗೋಕುಲ್ ಗೋವರ್ಧನ್ – ಸದಸ್ಯರು
6. ಡಾ. ಮಹೇಶ್ ಟಿ.ಬಿ. – ಸದಸ್ಯರು
7. ಡಾ. ಬಿ.ಆರ್. ಜಯಕುಮಾರಿ – ಸದಸ್ಯರು
8. ಡಾ. ಹೆಚ್.ಎಂ. ಮಹೇಶ – ಸದಸ್ಯರು
9. ಶ್ರೀ ಮಹದೇಶು – ಸದಸ್ಯರು
10. ಶ್ರೀ ನಾಗರಾಜು ಸಿ. – ಸದಸ್ಯರು
11. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ – ಸದಸ್ಯರು
12. ಡಾ. ಶಿಲ್ಪ ಜೆ. – ಸದಸ್ಯರು
13. ಡಾ. ನಟರಾಜು ಹೆಚ್.ಎಸ್. – ಸದಸ್ಯರು
14. ಶ್ರೀ ಎನ್. ಶಂಕರ – ಸದಸ್ಯರು
15. ಡಾ. ಎಂ. ಪುಷ್ಪವತಿ – ಸದಸ್ಯರು
16. ಡಾ. ಎನ್. ನಾಗರಾಜ, ಕುಲಸಚಿವರು (ಪರೀಕ್ಷಾಂಗ) – ಸದಸ್ಯರು
17. ಶ್ರೀಮತಿ ರೇಖಾ ಕೆ.ಎಸ್., ಹಣಕಾಸು ಅಧಿಕಾರಿಗಳು – ವಿಶೇಷ ಆಹ್ವಾನಿತರು
18. ಶ್ರೀಮತಿ ಸವಿತಾ ಎಂ.ಕೆ, ಕುಲಸಚಿವರು – ಸದಸ್ಯ ಕಾರ್ಯದರ್ಶಿ

**<u>ಅನುಪಸ್ಥಿತರು</u>**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀ ಶೇಖರ್, ಜಂಟಿ ನಿರ್ದೇಶಕರು, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ನಂತರ, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಇವರ ಪರವಾಗಿ ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ಆಗಮಿಸಿರುವ ಶ್ರೀಮತಿ ಡಿ.ಎಸ್. ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು ಇವರನ್ನು ಪರಿಚಯಿಸಿ ಸ್ವಾಗತಿಸಲಾಯಿತು.

| ದಿನಾಂಕ: 01-07-2025ರಂದು ಜರುಗಿದ "ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |
|---|---|
| | ಶ್ರೀ ಮಹದೇಶುರವರು ಮಾತನಾಡಿ, ಕಳೆದ 3-4 ಸಭೆಗಳಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅನುಕೂಲವಾಗುವಂತಹ ಸಲಹೆಗಳನ್ನು ನೀಡುತ್ತಾ ಬಂದಿರುತ್ತೇವೆ ಇದರ ಬಗ್ಗೆ ಯಾವ ಕ್ರಮವನ್ನು ವಹಿಸಿರುವಿರೀ ಎಂದು ಕೇಳಿದರು. ಮುಂದುವರೆದು ದೀನದಯಾಳ್ ಉಪಾಧ್ಯಾಯ ವಿದ್ಯಾರ್ಥಿಗಳ ವಸತಿ ಸಮುಚ್ಛಯವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಿಸಲ್ಪಟ್ಟಿದ್ದು, ಸದರಿ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಹೊಂದಿಕೊಂಡಂತೆ 400 x 40 ಅಡಿಗಳಲ್ಲಿರುವ ಜಾಗದಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡಲು ಶಂಕು ಸ್ಥಾಪನೆ ಮಾಡಿ ಜಾಗವನ್ನು ವಿಶ್ವವಿದ್ಯಾನಿಲಯದ ವಶಕ್ಕೆ ಪಡೆದುಕೊಳ್ಳುವುದಕ್ಕೆ ತಿಳಿಸಿದರೂ ಕೂಡ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಇತರೇ ವ್ಯಕ್ತಿಗಳು ಸದರಿ ಜಾಗವನ್ನು ಆಕ್ರಮಿಸಿಕೊಳ್ಳುವ ಮೊದಲೇ ವಿಶ್ವವಿದ್ಯಾನಿಲಯ ಸದ್ಯಕ್ಕೆ ಶೆಡ್‌ಗಳನ್ನಾದರೂ ನಿರ್ಮಿಸುವುದರಿಂದ ಜಾಗವನ್ನು ವಶಕ್ಕೆ ಪಡೆದುಕೊಳ್ಳಬಹುದು ಎಂದು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ಈಗಾಗಲೇ ಸದರಿ ಸ್ಥಳ ಪರಿಶೀಲನೆ ಕಾರ್ಯ ಮುಗಿದಿದೆ. ಸುಮಾರು 20 ಮಳಿಗೆಗಳಿಗೆ ಒಂದು ಅಂದಾಜು ಪಟ್ಟಿಯನ್ನು (Estimate) ಸಿದ್ಧಪಡಿಸಿಕೊಳ್ಳಲಾಗಿದೆ. ಮೊದಲಿಗೆ ಜಿ+2 ಹಂತದಲ್ಲಿ ಮಳಿಗೆ ಕಟ್ಟುವುದಕ್ಕೆ ಅವಕಾಶವಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಹಣಕಾಸಿನ ಪರಿಸ್ಥಿತಿಯನ್ನು ಅವಲೋಕಿಸಿ ತಕ್ಷಣವೇ ಕ್ರಮವಹಿಸಲಾಗಿದ್ದು, ಮೊದಲು ಕಟ್ಟಡವನ್ನು ಶೀಟ್‌ಗಳಿಂದ ನಿರ್ಮಿಸುವುದಕ್ಕೆ ಯೋಜನೆ ರೂಪಿಸಲಾಗಿತ್ತು. ಶೀಟ್‌ಗಳ ಅಳವಡಿಕೆಗೆ ತಗಲುವ ವೆಚ್ಚವು ತಾರಸಿ ಕಟ್ಟಡ ನಿರ್ಮಾಣಕ್ಕೆ ತಗಲುವ ವೆಚ್ಚಕ್ಕೆ ಅಜಗಜಾಂತರ ವ್ಯತ್ಯಾಸ ಕಂಡುಬಂದಿಲ್ಲ ಹಾಗೂ ಶೀಟ್ ಕಟ್ಟಡಕ್ಕೆ ಮಳಿಗೆದಾರರು ಬರುವುದಕ್ಕೆ ಹಿಂಜರಿಯಬಹುದಾಗಿದೆ. ಜಿ+2 ಹಂತದಲ್ಲಿ ತಾರಸಿ ಕಟ್ಟಡ ನಿರ್ಮಾಣಕ್ಕೆ ಅಂದಾಜುಪಟ್ಟಿಯನ್ನು (Estimate) ಸಿದ್ದಪಡಿಸಿದ್ದು, 20 ಮಳಿಗೆಗಳ ನಿರ್ಮಾಣಕ್ಕೆ ಅಂದಾಜು ರೂ.2.90 ಕೋಟಿ ಜಿಎಸ್‌ಟಿ ಒಳಗೊಂಡಂತೆ ಅಂದಾಜು ಪಟ್ಟಿಯನ್ನು ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗ ಇವರು ನೀಡಿರುತ್ತಾರೆ ಎಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ಒಮ್ಮೆ ಖಾಸಗಿಯವರು ಜಾಗವನ್ನು ಆಕ್ರಮಿಸಿಕೊಂಡರೆ ಜಾಗ ಕಳೆದುಕೊಳ್ಳುವ ಸಂಭವ ಹೆಚ್ಚಿರುತ್ತದೆ. ಆದ್ದರಿಂದ ನನ್ನ ಮನವಿ ಏನೆಂದರೆ ತಕ್ಷಣವೇ ಜಾಗದಲ್ಲಿ ಶಂಕುಸ್ಥಾಪನೆ ಮಾಡುವುದು ಉತ್ತಮ. ಈ ಸಂಬಂಧ ಟೆಂಡರ್‌ದಾರರನ್ನು ಆಹ್ವಾನಿಸಿ ಕಡಿಮೆ ದರದಲ್ಲಿ ಮಳಿಗೆಯನ್ನು ನಿರ್ಮಿಸುವ ಪ್ರಯತ್ನವನ್ನಾದರೂ ಮಾಡಬೇಕು ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈಗಾಗಲೇ ವಿಶ್ವವಿದ್ಯಾನಿಲಯದ ಜಾಗದಲ್ಲಿ ಖಾಸಗಿಯವರು ಜಾಗವನ್ನು ಆಕ್ರಮಿಸಿಕೊಂಡಿದ್ದು, ಅದರಂತೆ ಮಳಿಗೆ ಜಾಗವನ್ನು ಖಾಸಗಿಯವರು ಆಕ್ರಮಿಸಿಕೊಳ್ಳುವ ಸಂಭವವಿರುತ್ತದೆ ಸದ್ಯದ ಮಟ್ಟಿಗೆ ಶಂಕುಸ್ಥಾಪನೆಯನ್ನಾದರೂ ನೆರವೇರಿಸುವುದು ಸೂಕ್ತ ಎಂದು ತಿಳಿಸುತ್ತಾ, ಆಗ ಖಾಸಗಿಯವರಿಗೆ ಈ ಭೂಮಿಯು ವಿಶ್ವವಿದ್ಯಾನಿಲಯದ ಒಡೆತನಕ್ಕೆ ಒಳಪಟ್ಟಿದೆ ಎಂಬ ಅರಿವಿರುತ್ತದೆ. ಈ ಹಿನ್ನೆಲೆಯಲ್ಲಿ ಅದಷ್ಟು ಶೀಘ್ರವಾಗಿ ಸದರಿ ಜಾಗದಲ್ಲಿ ಶಂಕು ಸ್ಥಾಪನೆ ಮಾಡುವುದು ಒಳಿತೆಂದು ಪುನರುಚ್ಛರಿಸಿದರು. ಈ ಸಂಬಂಧ ಎಲ್ಲಾ ಸದಸ್ಯರು ಶಂಕುಸ್ಥಾಪನೆಯನ್ನು ಕೂಡಲೇ ನೆರವೇರಿಸಬೇಕೆಂದು ಕೋರಿದರು. |

ಶ್ರೀ ಮಹದೇಶುರವರು ಮಾತನಾಡಿ, 23 x 18 ಅಡಿ ಅಳತೆಯಲ್ಲಿ ಒಂದು ಮಳಿಗೆಗೆ ಫಿಲ್ಲರ್‌ನ್ನು ಅಳವಡಿಸುವ ಕಾಮಗಾರಿಯನ್ನು ಒಮ್ಮೆ ಪ್ರಾರಂಭಿಸಿದರೆ ಮಳಿಗೆಯ ಅವಶ್ಯಕತೆಯಿರುವ ಟೆಂಡರ್‌ದಾರರು ಸ್ವಯಂಪ್ರೇರಿತರಾಗಿ ಅವಶ್ಯವಿರುವಷ್ಟು ಮಳಿಗೆಯನ್ನು ನೀಡುವಂತೆ ಬೇಡಿಕೆ ಸಲ್ಲಿಸುವ ಸಂಭವ ಹೆಚ್ಚಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, 23 x 18ರ ಅಡಿಯಲ್ಲಿ ಮಳಿಗೆ ಮಾಡುವುದರಿಂದ ಸಣ್ಣ ಮಳಿಗೆಗಳು ಎಂದು ಹಿಂಜರಿಯುವ ಸಾಧ್ಯತೆಗಳು ಸಹ ಇರುತ್ತದೆ ಆದ್ದರಿಂದ ದೊಡ್ಡ ಮಳಿಗೆಗಳನ್ನು ಕಟ್ಟುವುದು ಸೂಕ್ತ ಎಂದು ತಿಳಿಸಿದರು.

ಡಾ. ನಟರಾಜು ಹೆಚ್ ಎಸ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಜಾಗದಲ್ಲಿ ಒಂದು ಖಾಸಗಿ ಶಾಲೆಯವರು ಕಟ್ಟಡವನ್ನು ಕಟ್ಟಿರುತ್ತಾರೆ. ಇದಕ್ಕೆ ಪರಿಹಾರವಾಗಿ ಕುದುರೆ ಮಾಳದಲ್ಲಿ ಒಂದು ಜಾಗವನ್ನು ನೀಡಿರುತ್ತಾರೆ ಇದರ ಕಾರ್ಯವನ್ನು ಸಹ ಕುಲಸಚಿವರು ಮುತುವರ್ಜಿಯಿಂದ ಮಾಡುತ್ತಿದ್ದಾರೆ. ಅದರಂತೆ ಹೊಸದಾಗಿ ನಿರ್ಮಾಣವಾಗುತ್ತಿರುವ ವಿದ್ಯಾರ್ಥಿನಿಲಯದ ಪಕ್ಕದ ಜಾಗವನ್ನು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ ಆದ್ದರಿಂದ ಕೂಡಲೇ ಆ ಜಾಗದಲ್ಲಿ ಶಂಕುಸ್ಥಾಪನೆಯನ್ನು ಮಾಡಬೇಕೆಂದು ತಿಳಿಸಿದರು

ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸದ್ಯದ ಮಟ್ಟಿಗೆ ಪಿಲ್ಲರ್ ಆದರೂ ಹಾಕುವ ಪ್ರಯತ್ನ ಮಾಡಿ, ಜಾಗವನ್ನು ಯಾವ ಮಳಿಗೆದಾರರು ಪಡೆಯುತ್ತಾರೆ, ಅವರಿಂದ ಮುಂಗಡ ರೂಪದಲ್ಲಿ ಪಡೆಯುವ ಹಣದಲ್ಲಿ ಕಟ್ಟಡವನ್ನು ಪೂರ್ಣಗೊಳಿಸುವ ಪ್ರಯತ್ನ ಮಾಡಬಹುದೆಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್.ರವರು ಮಾನಸಗಂಗೋತ್ರಿಯ ಆವರಣದಲ್ಲಿರುವ ಕುಕ್ಕರಳ್ಳಿ ಕೆರೆಯಿಂದ ಬಯಲು ರಂಗಮಂದಿರದ ಕಡೆಗೆ ಹೋಗುವ ದಾರಿಯಲ್ಲಿ ಹಿಂದಿನ ಕುಲಪತಿಗಳು ಮೈಸೂರು ಮಹಾರಾಜರ ಆಸ್ಥಾನದ ವತಿಯಿಂದ ಬೀದಿ ನಾಯಿಗಳಿಗೆ ಊಟ ಹಾಕುತ್ತಿದ್ದಂತಹ ವ್ಯಕ್ತಿಗಳಿಗೆ ಆ ಜಾಗವನ್ನು ಕೊಟ್ಟಿರುವ ಮಾಹಿತಿಯಿದ್ದು, ಈ ಸಂಬಂಧ ಕೂಡ ಪರಿಶೀಲಿಸಬೇಕೆಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಡಾ. ನಟರಾಜು ಹೆಚ್ ಎಸ್‌ರವರು ತಿಳಿಸಿರುವ ಜಾಗದಲ್ಲೇ ಖಾಸಗಿ ಸ್ವತ್ತು ಇದೆ. ಖಾಸಗಿರವರಿಗೆ ಈ ಜಾಗ ಹೇಗೆ ವರ್ಗಾವಣೆಯಾಗಿದೆ ಎಂಬುದರ ಕುರಿತು ವಿಶ್ವವಿದ್ಯಾನಿಲಯದ ಕಾರ್ಯಪಾಲಕ ಅಭಿಯಂತರರಿಗೆ ಮಾಹಿತಿ ಕೇಳಿದಾಗ ಅವರು ಆ ರೀತಿ ಯಾವುದೇ ಜಾಗವೂ ಸಹ ಇಲ್ಲ ಎಂದು ತಿಳಿಸಿರುತ್ತಾರೆ.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಶ್ರೀ ಮಹದೇಶುರವರು ಕೇಳಿದ ಪ್ರಶ್ನೆಯನ್ನು ಮಾನ್ಯ ಕುಲಪತಿಯವರ ಆಪ್ತ ಸಹಾಯಕರಿಗೆ ಕೇಳಿದಾಗ ಅವರು ತಕ್ಷಣವೇ ಜಾಗದ ಬಳಿ ಹೋಗಿ ಪರಿಶೀಲಿಸುವುದಾಗಿ ತಿಳಿಸುತ್ತಾರೆ. ಇದೇ ರೀತಿ ಒಬ್ಬರಿಂದೊಬ್ಬರಿಗೆ ಕೇಳುತ್ತಾ ಹೋದರೆ, ಮಾಹಿತಿ ಲಭ್ಯವಾಗದೆ ಖಾಸಗಿಯರವರು ಅಲ್ಲಿ ಕಟ್ಟಡ ನಿರ್ಮಿಸಿಕೊಂಡು ಹೋಟೆಲ್, ಲಾಡ್ಜ್ ರೀತಿಯ ಚಟುವಟಿಕೆಗಳು ಪ್ರಾರಂಭ ಮಾಡುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ, ಮಾನ್ಯ ಕುಲಪತಿಗಳು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಎಸ್ಟೇಟ್ ಅಧಿಕಾರಿ ಮತ್ತು ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿ ಸದರಿ ಜಾಗದ ಕುರಿತಾಗಿ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲು ಸೂಚಿಸುವುದಾಗಿ ತಿಳಿಸಿದರು.

| | |
|---|---|
| | ಮಾನ್ಯ ಕುಲಸಚಿವರು ಮಾತನಾಡಿ, ದೀನದಯಾಳ್ ಉಪಾಧ್ಯಾಯ ವಿದ್ಯಾರ್ಥಿಗಳ ವಸತಿ ಸಮುಚ್ಛಯಕ್ಕೆ ಹೊಂದಿಕೊಂಡಂತಿರುವ ವಿಶ್ವವಿದ್ಯಾನಿಲಯದ ಜಾಗದಲ್ಲಿ ಸದ್ಯದಲ್ಲಿಯೇ ವಾಣಿಜ್ಯ ಮಳಿಗೆಗಳ ಕಟ್ಟಡವನ್ನು ಕಟ್ಟುವ ಕಾರ್ಯವನ್ನು ಪ್ರಾರಂಭಿಸುವ ಕುರಿತು ಅಗತ್ಯ ಕ್ರಮವಹಿಸಲಾಗುವುದು ಹಾಗೂ ಈ ಸಂಬಂಧ ಸದ್ಯದಲ್ಲಿಯೆ ಶಂಕು ಸ್ಥಾಪನೆ ಕಾರ್ಯವನ್ನು ನೆರವೇರಿಸಲಾಗುವುದು. ಸದರಿ ಸಮಯ ಮತ್ತು ದಿನಾಂಕವನ್ನು ಆದಷ್ಟು ಶೀಘ್ರವಾಗಿ ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತರಲಾಗುವುದೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಕಳೆದ ಎರಡು ಸಿಂಡಿಕೇಟ್‌ನ ಸಾಮಾನ್ಯ ಸಭೆಯಲ್ಲಿ ನಿಕಟಪೂರ್ವ ಸಿಂಡಿಕೇಟ್ ಸದಸ್ಯರಾಗಿದ್ದ ಡಾ. ಬಸವರಾಜು ಸಿ. ಇವರು ಪ್ರಸ್ತಾಪಿಸಿದ ವಿಷಯವಾದ ವಿಶ್ವವಿದ್ಯಾನಿಲಯದ ಅಧ್ಯಾಪಕರಿಗೆ ಸಿಎಎಸ್ ಯೋಜನೆಯಡಿ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಅರ್ಹರಲ್ಲದ ಅಧ್ಯಾಪಕರಿಗೂ ಸಹ ಪದೋನ್ನತಿ ನೀಡಿರುವುದು ಗಮನಕ್ಕೆ ಬಂದಿದ್ದು, ಈ ಸಂಬಂಧ ಯಾವುದಾದರೂ ಲೋಪದೋಷಗಳು ಕಂಡು ಬಂದಿದ್ದರೆ ಮಾಹಿತಿ ನೀಡುವುದಾಗಿ ಮಾನ್ಯ ಕುಲಪತಿಗಳು ಹಿಂದಿನ ಸಭೆಗಳಲ್ಲಿ ತಿಳಿಸಿದ್ದರು. ಈ ಸಂಬಂಧ ಯಾವ ಕ್ರಮವಹಿಸಲಾಗಿದೆ ಎಂದು ಕೇಳಿದರು. ಈ ವಿಷಯಕ್ಕೆ ಡಾ. ಶಿಲ್ಪ ಜೆ ರವರು ದನಿಗೂಡಿಸಿ ಮಾನದಂಡ/ಅರ್ಹತೆ ಹೊಂದಿಲ್ಲದ ಅಧ್ಯಾಪಕರುಗಳಿಗೆ ಸಹ ಪದೋನ್ನತಿ ನೀಡಿರುವುದಾಗಿ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಅಧ್ಯಾಪಕರುಗಳಿಗೆ ಪದೋನ್ನತಿ ನೀಡುವುದಕ್ಕೆ ಸಂಬಂಧಿಸಿದಂತೆ ಒಂದು ಸಮಿತಿ ಇದೆ. ಆ ಸಮಿತಿಯ ವರದಿಯ ಆಧಾರದ ಮೇಲೆ ಪದೋನ್ನತಿ ನೀಡಲಾಗುತ್ತದೆ. ಇದನ್ನು ಪ್ರಶ್ನಿಸುವ ಹಕ್ಕು ನಮ್ಮ ವ್ಯಾಪ್ತಿಗೊಳಪಟ್ಟಿರುವುದಿಲ್ಲ ಎಂದು ತಿಳಿಸಿದರು.<br><br>ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, CAS ಅಡಿಯಲ್ಲಿ ಪದೋನ್ನತಿಗೆ ಸಂಬಂಧಿಸಿದಂತೆ, ಅಧ್ಯಾಪಕರು ಪ್ರಪ್ರಥಮ ಬಾರಿಗೆ ವಿಶ್ವವಿದ್ಯಾನಿಲಯದಲ್ಲಿ ಸೇವೆಗೆ ಸೇರುವ ಸಂದರ್ಭದಲ್ಲಿ ಆಯ್ಕೆ ಮಂಡಳಿ ಸಭೆಯು ನಡೆಸುವ ನೇರ ಸಂದರ್ಶನದಲ್ಲಿ ಭಾಗವಹಿಸಿ ಆಯ್ಕೆಯಾಗಿರುತ್ತಾರೆ. ತದ ನಂತರ ಅಧ್ಯಾಪಕರುಗಳು ಸಹಾಯಕ ಪ್ರಾಧ್ಯಾಪಕರಿಂದ ಸಹ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರಿಂದ ಪ್ರಾಧ್ಯಾಪಕರ ಹುದ್ದೆಗೆ ಸಿಎಎಸ್ ಯೋಜನೆಯಡಿ ಪದೋನ್ನತಿಗೊಳ್ಳುತ್ತಾರೆ. ಈ ಪದೋನ್ನತಿಗೂ ಸಹ ಆಯ್ಕೆ ಮಂಡಳಿಯನ್ನು (Board of Appointment) ರಚಿಸಲಾಗಿರುತ್ತದೆ. ಈ ಸಮಿತಿಯಲ್ಲಿಯೂ ಸಹ ಕುಲಪತಿಗಳು ಅಧ್ಯಕ್ಷರಾಗಿ, ಸರ್ಕಾರದಿಂದ ಮತ್ತು ರಾಜ್ಯಪಾಲರಿಂದ ನಾಮನಿರ್ದೇಶನಗೊಂಡ ವಿಷಯ ತಜ್ಞರಿರುತ್ತಾರೆ. ಇದು ಒಮ್ಮತದಿಂದ ನೇಮಕಾತಿ ಮಂಡಳಿಯಲ್ಲಿ ಸದಸ್ಯರು ಪ್ರಥಮವಾಗಿ ಅಧ್ಯಾಪಕರುಗಳಿಗೆ ಪದೋನ್ನತಿ ನೀಡಬಹುದಾ ಎಂಬುದರ ಕುರಿತಾಗಿ/ ನೇಮಕಾತಿ ನಿಯಮಗಳು ಪಾಲಿಸಲಾಗಿದೆಯೇ ಎಂದು ಸಮಗ್ರ ಪರಿಶೀಲನೆ ನಡೆಸಿ ಅಧ್ಯಾಪಕರು ಪದೋನ್ನತಿಗೆ ಅರ್ಹರೇ ಅಥವಾ ಅನರ್ಹರೇ ಎಂದು ಮಾತ್ರ ಶಿಫಾರಸ್ಸು ಮಾಡಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.<br><br>ಪ್ರೊ. ಎಸ್.ಜೆ. ಮಂಜುನಾಥ್‌ರವರು ಮಾತನಾಡಿ, ಪದೋನ್ನತಿ ನೀಡುವ ನೇಮಕಾತಿ ಮಂಡಳಿಗೆ ಪ್ರಶ್ನಿಸುವ ಅಧಿಕಾರ ಸಿಂಡಿಕೇಟ್ ಸದಸ್ಯರುಗಳಿಗೂ ಸಹ ಇರುವುದಿಲ್ಲ, ಪ್ರಶ್ನಿಸುವುದಾದರೆ ನ್ಯಾಯಾಲಯದ ಮೂಲಕವೇ ಪ್ರಶ್ನಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಮಾನ್ಯ ಕುಲಸಚಿವರು ಮಾತನಾಡಿ, ಪದೋನ್ನತಿ ಅರ್ಹರಲ್ಲದವರು ಯಾರು ಎಂದು ನಿರ್ಧಿಷ್ಟವಾಗಿ ತಿಳಿಸಿ ಸದರಿ ಪದೋನ್ನತಿಯಲ್ಲಿ ಆಗಿರುವ ಲೋಪದ ಕುರಿತು ಲಿಖಿತ ರೂಪದಲ್ಲಿ ಸಲ್ಲಿಸುವಂತೆ ತಿಳಿಸಿದರು |

ಮಾನ್ಯ ಕುಲಪತಿಯವರು ಮಾತನಾಡಿ, ಸಿಎಎಸ್ ಯೋಜನೆಯಡಿ ಹಿಂದಿನ ಕುಲಪತಿಗಳ ಅವಧಿಯಲ್ಲಿ ಪದೋನ್ನತಿ ನೀಡುವ ಸಂದರ್ಭದಲ್ಲಿ ಅರ್ಹರಲ್ಲದ ಯಾವುದಾದರೂ ಅಧ್ಯಾಪಕರಿಗೆ ಪದೋನ್ನತಿ ನೀಡಿರುವ ಬಗ್ಗೆ ನಿಮ್ಮ ಬಳಿ ಮಾಹಿತಿ ಇದ್ದಲ್ಲಿ ಲಿಖಿತ ರೂಪದಲ್ಲಿ ಮನವಿ ಸಲ್ಲಿಸಿದಲ್ಲಿ, ಈ ಸಂಬಂಧ ಪರಿಶೀಲನಾ ಸಮಿತಿಗೆ ತಾವು ಸಲ್ಲಿಸುವ ಮನವಿಯನ್ನು ರವಾನಿಸಿ ಮತ್ತೊಮ್ಮೆ ಪದೋನ್ನತಿಯಲ್ಲಿ ಆಗಿರುವ ಲೋಪಗಳನ್ನು ಪರಿಶೀಲಿಸಿ ಕೊಡುವಂತೆ ತಿಳಿಸಲಾಗುವುದೆಂದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಕಳೆದ ಸಭೆಯ ವಿಷಯ ಸಂಖ್ಯೆ 2025-/4.17ರ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿ, ಎಂಬಿಎ ಕೋರ್ಸ್‌ಗೆ ಹೆಚ್ಚು ಬೇಡಿಕೆ ಇರುವುದರಿಂದ ಸರ್ಕಾರದ ಅನುಮೋದನೆ ಪಡೆದುಕೊಂಡು ಹೆಚ್ಚುವರಿಯಾಗಿ 30 ಅಥವಾ 60 ಸೀಟುಗಳನ್ನು ಹೆಚ್ಚಿಸುವುದಕ್ಕೆ ಕ್ರಮವಹಿಸಲು ಕೋರಿದ್ದರು ಸಹ ಕ್ರಮಕೈಗೊಂಡಿರುವುದಿಲ್ಲ ಎಂದು ತಿಳಿಸಿದರು.

ಪ್ರೊ. ಎಸ್.ಜೆ.ಮಂಜುನಾಥ್‌ರವರು ಮಾತನಾಡಿ, ಈಗಾಗಲೇ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ವಿಭಾಗದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು (ವಿದೇಶಿ ವಿದ್ಯಾರ್ಥಿಗಳನ್ನೊಳಗೊಂಡಂತೆ) ಪ್ರವೇಶಾತಿ ಹೊಂದಿರುತ್ತಾರೆ. ಈ ಹಿನ್ನೆಲೆಯಲ್ಲಿ ಅದಕ್ಕೂ ಮೀರಿ ಹೆಚ್ಚುವರಿಯಾಗಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೂ ಸಹ ವಿಭಾಗದಲ್ಲಿ ಮೂಲಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಬಹುದು. ಆದರೆ ಮೂಲಸೌಕರ್ಯಗಳ ಕೊರತೆ ಉಂಟಾಗುವ ಸಾಧ್ಯತೆ ಹಾಗೂ ಡೀನರು ತಿಳಿಸುವ ಹಾಗೆ ಅಧ್ಯಾಪಕರ ಕೊರತೆಯಿದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಕಳೆದೆರೆಡು ಸಭೆಗಳಿಂದ ಟೆಂಡರ್ ಪ್ರಕ್ರಿಯೆ ಪ್ರಾರಂಭಕ್ಕೂ ಮುನ್ನ ಸಿಂಡಿಕೇಟ್ ಸಭೆಯಲ್ಲಿ ಅನುಮತಿ ಪಡೆಯಬೇಕಾಗಿ ಕೋರಿರುತ್ತೇನೆ. ಅದರೆ ಕಳೆದ ಸಭೆಯ ವಿಷಯ ಸಂಖ್ಯೆ 2025-/4.19ರ ವಿಷಯಕ್ಕೆ ಸಂಬಂಧಿಸಿದಂತೆ, ಟೆಂಡರ್ ಕಾರ್ಯಸೂಚಿಯ ಅನುಸಮರ್ಥನೆಗೆ ನನ್ನ ಅಸಮ್ಮತಿ ಇದೆ ಎಂದು ತಿಳಿಸಿರುತ್ತೇನೆ. ತೀರ್ಮಾನದಲ್ಲಿ ಅನುಸಮರ್ಥಿಸಿತು ಎಂಬ ಪದವನ್ನು ಹಿಂಪಡೆಯಬೇಕೆಂದು ತಿಳಿಸಿದರು ಹಾಗೂ ಚರ್ಚೆಯಲ್ಲಿ "ಪ್ರತಿಬಾರಿಯು ಅನುಮೋದನೆ ಪಡೆದ ನಂತರವೇ ಅನುಸಮರ್ಥನೆಗಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುತ್ತಿದೆ" ಎಂಬ ಪದಗಳನ್ನು ನಾನು ಹೇಳಿರುವುದಿಲ್ಲ ವಾಕ್ಯವನ್ನು ತೆಗೆದುಹಾಕಿ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, 2025-26ನೇ ಸಾಲಿನ ಪ್ರವೇಶಾತಿ ಕಾರ್ಯಗಳನ್ನು ಕಳೆದ ಸಿಂಡಿಕೇಟ್ ಸಭೆಯ ಪೂರ್ವದಲ್ಲಿ ನಡೆಸಬೇಕಾಗಿದ್ದರಿಂದ ಪ್ರವೇಶಾತಿಗೆ ಅವಶ್ಯವಿರುವ ಸಾಫ್ಟ್‌ವೇರ್‌ನ್ನು ಸಿದ್ಧಪಡಿಸುವ ಮತ್ತು ಪ್ರವೇಶಾತಿ ಕಾರ್ಯವನ್ನು ನಡೆಸುವ ಸಲುವಾಗಿ ಅನಿವಾರ್ಯವಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿರುತ್ತದೆ. ತದ ನಂತರ ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥನೆಗಾಗಿ ಮಂಡಿಸಲಾಗಿರುತ್ತದೆ ಹಾಗೂ ಟೆಂಡರ್ ಸಂಬಂಧಿತ ಯಾವುದಾದರೂ ಮಾಹಿತಿ ಬೇಕೆಂದಲ್ಲಿ, ಈಗಾಗಲೇ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತಿಳಿಸಿದಂತೆ ನಿರ್ದೇಶಕರು, ಐಸಿಡಿ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಸಂಪರ್ಕಿಸುವಂತೆ ಸಹ ತಿಳಿಸಲಾಗಿತ್ತು ಎಂದು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 29 (1) ಮತ್ತು 29 (2ಬಿ) ಪ್ರಕಾರ ವಿಶ್ವವಿದ್ಯಾನಿಲಯ

| | |
|---|---|
| | ಯಾವುದೇ ರೀತಿಯ ಒಪ್ಪಂದ ಮಾಡಿಕೊಳ್ಳಲು, ಬದಲಾಯಿಸಲು ಮತ್ತು ರದ್ದುಗೊಳಿಸುವ ಹಕ್ಕು ಹೊಂದಿರುತ್ತದೆ. ಇದರ ಅಡಿಯಲ್ಲಿ ಬರತಕ್ಕ ಟೆಂಡರ್ ಕೆಪಿಟಿ ಆಕ್ಟ್ 1999 ಸೆಕ್ಷನ್ 9ರ ಪ್ರಕಾರ ವಿಶ್ವವಿದ್ಯಾನಿಲಯ ಯಾವುದೇ ಸರಕು ಮತ್ತು ಸೇವೆಗಳ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಸಿಂಡಿಕೇಟ್ ಸಭೆಯ ತೀರ್ಮಾನದ ಮೂಲಕವೇ ಒಂದು ಟೆಂಡರ್ ಸಮಿತಿಯನ್ನು ರಚಿಸಬೇಕಾಗುತ್ತದೆ ನಂತರ ಎಲ್ಲಾ ಪ್ರಕ್ರಿಯೆಗಳಿಗೂ ಕೂಡ ಸಿಂಡಿಕೇಟ್ ಅನುಮೋದನೆ ಕಡ್ಡಾಯವಾಗಿದೆ ಎಂದು ಸ್ಪಷ್ಟವಾಗಿ ನಮೂದಿಸಿದೆ, ಈ ಹಿನ್ನೆಲೆಯಲ್ಲಿ ಕಾಯ್ದೆಗಳ ಉಲ್ಲಂಘನೆಯಾಗಿದೆಂದು ತಿಳಿಸಿದರು .<br><br>ಮಾನ್ಯ ಕುಲಪತಿಯವರು ಮಾತನಾಡಿ, ವಿದ್ಯಾರ್ಥಿಗಳ ಪ್ರವೇಶಾತಿ ಸಂಬಂಧ ಕೂಡಲೇ ಕ್ರಮಕೈಗೊಳ್ಳಬೇಕಾಗಿರುವ ಕಾರಣ ನಾವು ಕ್ರಮಕೈಗೊಂಡಿರುತ್ತೇವೆ. ಇಲ್ಲಿ ಯಾವುದೇ ನಿಯಮಗಳು ಉಲ್ಲಂಘನೆಯಾಗಿರುವುದಿಲ್ಲ ಹಾಗೂ ಕೆಟಿಟಿಪಿ ಕಾಯ್ದೆ ಮೂಲಕವೇ ಕ್ರಮಕೈಗೊಂಡಿರುತ್ತೇವೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಅವಶ್ಯಕತೆ ಇರುವುದನ್ನು ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರವಿದೆ ಆದರೆ ನಾನು ತಿಳಿಸುತ್ತಿರುವುದು ಕಾರ್ಯವಿಧಾನ ವಿಳಂಬದ ಕುರಿತಾಗಿ ನನ್ನ ಪ್ರಶ್ನೆ ಇರುತ್ತದೆ ಯಾವುದೇ ಟೆಂಡರ್‌ಗಳು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ತರುವ ಬದಲಾಗಿ ಅನುಮೋದನೆಗೆ ತರಬೇಕಾಗಿ ಮನವಿ ಮಾಡಿಕೊಂಡರು.<br><br>ಕುಲಸಚಿವರು ಮಾತನಾಡಿ, ಟೆಂಡರ್ ಪ್ರಕ್ರಿಯೆ ಸಮಯದಲ್ಲಿ ದರಗಳು ವ್ಯತ್ಯಾಸವಾಗುವ ಸಂದರ್ಭಗಳು ಎದುರಿಸಬೇಕಾಗುತ್ತದೆ ಇದನ್ನು ಕಾರ್ಯರೂಪಕ್ಕೆ ತರುವಷ್ಟರಲ್ಲಿ ಸಿಂಡಿಕೇಟ್ ಸಭೆಯು ಮುಗಿದಿರುತ್ತದೆ. ಅಂತಹ ಸಂದರ್ಭದಲ್ಲಿ ಟೆಂಡರ್ ಪ್ರಕ್ರಿಯೆಗಳನ್ನು ಸಿಂಡಿಕೇಟ್ ಅನುಸಮರ್ಥನೆಗೆ ತರಲಾಗಿರುತ್ತದೆ ಎಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಮುಂದಿನ ಯಾವುದೇ ಟೆಂಡರ್ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯ ಕಾಯ್ದೆ 2000 ಪ್ರಕರಣ 29 (1) ಮತ್ತು 29 (2ಬಿ) ಪ್ರಕಾರ ಕಾರ್ಯರೂಪಕ್ಕೆ ತರಬೇಕೆಂದು ತಿಳಿಸಿದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ಟೆಂಡರ್ ಆಹ್ವಾನಿಸುವ ಮುನ್ನ ಸಿಂಡಿಕೇಟ್ ಅನುಮತಿ ಪಡೆದುಕೊಂಡು ಟೆಂಡರ್ ಆಹ್ವಾನಿಸಬೇಕಾಗಿ ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಪ್ರಕರಣ 15 (5) ರಲ್ಲಿ ತಿಳಿಸಿರುವಂತೆ ಅನಿವಾರ್ಯ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಹಿತದೃಷ್ಠಿಯಿಂದ ನಾವು ಕ್ರಮಕೈಗೊಂಡಿರುತ್ತೇವೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಳೆದ ಸಭೆಯ ಇತರೆ ವಿಷಯ ಸಂಖ್ಯೆ: 02ರಲ್ಲಿ ತಿಳಿಸಿರುವಂತೆ, ಪ್ಲಾಸ್ಟಿಕ್ ಮುಕ್ತ ಮತ್ತು ಬ್ಯಾನರ್/ಫ್ಲೆಕ್ಸ್ ಅಳವಡಿಸಿದಂತೆ ತಿಳಿಸಲಾಗಿತ್ತು. ವಿಶ್ವವಿದ್ಯಾನಿಲಯದ ನೋಂದಾಯಿತ ಸಂಘಟನೆಗಳಿಗೆ ಪ್ಲಾಸ್ಟಿಕ್ ಮುಕ್ತ ಮತ್ತು ಬ್ಯಾನರ್/ಫ್ಲೆಕ್ಸ್ ಮುಕ್ತ ಆವರಣವಾಗಿ ನಿರ್ಮಿಸುವ ನಿಟ್ಟಿನಲ್ಲಿ ಬ್ಯಾನರ್/ಫ್ಲೆಕ್ಸ್ ಅಳವಡಿಸಿದಂತೆ ಸುತ್ತೋಲೆಯನ್ನು ಹೊರಡಿಸಲು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ಮುಂದುವರೆದು, ನೋಂದಾಯಿತ ಸಂಘಟನೆ ಮತ್ತು ನೋಂದಣಿ ರಹಿತ ಸಂಘಟನೆಗಳಿಗೆ ಪ್ಲಾಸ್ಟಿಕ್ ಮುಕ್ತ ಮತ್ತು ಬ್ಯಾನರ್/ಫ್ಲೆಕ್ಸ್ ಮುಕ್ತ ಮಾನಸಗಂಗೋತ್ರಿ ಎಂಬ ಸ್ಲೋಗನ್ ಅನ್ನು ಅಳವಡಿಸುವುದರೊಂದಿಗೆ ಶಿಕ್ಷಣ ಕ್ಷೇತ್ರದಲ್ಲಿ |

| | |
|---|---|
| | ಕ್ರಾಂತಿಕಾರಿ ಬದಲಾವಣೆ ಮಾಡಿರುವಂತಹ ಮಹನೀಯರ ಘೋಷಣಾ ವಾಕ್ಯಗಳಿರುವ ಫಲಕಗಳನ್ನು ಅಳವಡಿಸುವುದು ಸೂಕ್ತವೆಂದರು.<br><br>ಸಿಂಡಿಕೇಟಿನ ಸದಸ್ಯರುಗಳು ಮಾತನಾಡಿ, ರಾಜ್ಯ ಸರ್ಕಾರವಾಗಲೀ ಅಥವಾ ಇತರೇ ಯಾವುದೇ ಸಂಘ/ಸಂಸ್ಥೆಗಳ ವತಿಯಿಂದ ನಡೆಯುವಂತಹ ಕಾರ್ಯಕ್ರಮಗಳ ಕುರಿತು ಬ್ಯಾನರ್‌ಗಳನ್ನು ನಗರದಾದ್ಯಂತ ಅಳವಡಿಸುತ್ತಾರೆ. ಸದರಿ ಕಾರ್ಯಕ್ರಮಗಳು ಮುಗಿದ ಮೂರು ದಿನಗಳೊಳಗಾಗಿ ಸದರಿ ಬ್ಯಾನರ್‌ಗಳನ್ನು ತೆರವುಗೊಳಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ಆವರಣದಲ್ಲಿ ಬ್ಯಾನರ್ ಮುಕ್ತ ಹಾಗೂ ಪ್ಲಾಸ್ಟಿಕ್ ಮುಕ್ತ ಆವರಣವೆಂದು ಹಾಗೂ 'ಸ್ವಚ್ಛ ಗಂಗೋತ್ರಿ'ಯಾಗಿ ಪರಿವರ್ತಿಸುವ ನಿಟ್ಟಿನಲ್ಲಿ ಸುತ್ತೋಲೆಯನ್ನು ಹೊರಡಿಸುವುದು ಸೂಕ್ತವೆಂದು ಸಲಹೆ ನೀಡಿದರು. ಮಾನಸಗಂಗೋತ್ರಿಯ ಆವರಣ ದಲ್ಲಿರುವ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಪಾದಚಾರಿ ರಸ್ತೆಯ ದಿಕ್ಕುಗಳನ್ನು ಸೂಚಿಸುವ ಫಲಕವನ್ನು ಅಳವಡಿಸುವುದು ಸೂಕ್ತವೆಂದು ಸಲಹೆ ನೀಡಿದರು.<br><br>ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, ಈ ಮೊದಲು ಅಲ್ಲಿ ವಿಶ್ವವಿದ್ಯಾನಿಲಯಕ್ಕೆ ಬಸ್ ವ್ಯವಸ್ಥೆ ಮಾಡಲಾಗಿತ್ತು, ಆ ಬೋರ್ಡ್‌ನಲ್ಲಿ ಬಸ್ ಸಂಚಾರದ ಅವಧಿಯನ್ನು ತಿಳಿಸಲಾಗುತ್ತಿತ್ತು. ಬಸ್ ಸಂಚಾರ ನಿಲುಗಡೆಯಿಂದ ವಿದ್ಯಾರ್ಥಿ ಸಂಘಟನೆಗಳು ಪ್ಲೆಕ್ಸ್ ಆಳವಡಿಸಲು ಪ್ರಾರಂಭಿಸಿರುತ್ತಾರೆ ಎಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ಡಿಜಿಟಲ್ ಬೋರ್ಡ್ ಕೆಟ್ಟುನಿಂತಿದೆ ದಯಮಾಡಿ ದುರಸ್ಥಿಗೊಳಿಸಿ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಡಿಜಿಟಲ್ ಬೋರ್ಡ್ ಹೊಸದಾಗಿ ಅಳವಡಿಸಬೇಕಾಗಿದೆ ಎಂದು ತಿಳಿಸಿದರು. |
| ತೀರ್ಮಾನ | **ದಿನಾಂಕ: 01-07-2025ರಂದು ಜರುಗಿದ "ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು.** |
| **ಸಾಮಾನ್ಯ ಸಭೆ 2025/5.1** | ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದಲ್ಲಿ ಸ್ಥಾಪಿಸಲಾಗಿರುವ ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | **ಡಾ. ಬಾಬೂ ಜಗಜೀವನರಾಮ್ ಅಧ್ಯಯನ, ಸಂಶೋಧನ ಮತ್ತು ವಿಸ್ತರಣ ಕೇಂದ್ರದಲ್ಲಿ ಸ್ಥಾಪಿಸಲಾಗಿರುವ ಡಾ. ಬಾಬೂ ಜಗಜೀವನರಾಮ್ ಅಧ್ಯಯನ ಪೀಠಕ್ಕೆ ಶ್ರೀ ಬಿ.ಆರ್.ಭೀಮಾಶಂಕರ್, ಐ.ಆರ್.ಎಸ್.(ನಿವೃತ್ತಿ) ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/-ಗಳ ಗೌರವ ಸಂಭಾವನೆಯೊಂದಿಗೆ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/5.2** | ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಸಭೆಯ ತೀರ್ಮಾನಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ. |
| ತೀರ್ಮಾನ | **ದಿನಾಂಕ: 19-06-2024ರಂದು ಜರುಗಿದ 2025-26ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿ ಸಭೆಯ ತೀರ್ಮಾನಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

| | |
|---|---|
| ಸಾಮಾನ್ಯ ಸಭೆ 2025/5.3 | ರತ್ನ ಕಾಲೇಜ್ ಆಫ್ ಸೈನ್ಸ್ ಮತ್ತು ಬುಸಿನೆಸ್ ಮ್ಯಾನೇಜ್‌ಮೆಂಟ್, ಕುವೆಂಪುನಗರ, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ಹೆಚ್ಚುವರಿಯಾಗಿ ಹೊಸ ಕೋರ್ಸ್ ಅನ್ನು ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ "The University of Mysore-Recognition of Certain institutions for specified studies/specialized and Research Statutes 2008" ಅಧಿನಿಯಮದ ಅನುಸಾರ ರತ್ನ ಕಾಲೇಜ್ ಆಫ್ ಸೈನ್ಸ್ ಮತ್ತು ಬುಸಿನೆಸ್ ಮ್ಯಾನೇಜ್‌ಮೆಂಟ್, ಕುವೆಂಪುನಗರ, ಮೈಸೂರು ಇವರ ಸಂಸ್ಥೆಗೆ Specialized Programme ಅಡಿಯಲ್ಲಿ ಹೆಚ್ಚುವರಿಯಾಗಿ ಹೊಸ ಕೋರ್ಸ್ M.Sc (Clinical Embryology)-40 intake ನೊಂದಿಗೆ 2025-26ನೇ ಸಾಲಿನಿಂದ ಪ್ರಾರಂಭಿಸಲು ಅನುಮತಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2025/5.4 | Sera Jey Monastic Institute ಬೈಲಕುಪ್ಪೆ ಪೋಸ್ಟ್, ಮೈಸೂರು ಜಿಲ್ಲೆ, ಇವರ ಸಂಸ್ಥೆಯಲ್ಲಿ 1) Ancient Tibetan Language 2) Ancient Philosophy 3) Ancient Psychology ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ Sera Jey Monastic Institute ಬೈಲಕುಪ್ಪೆ ಪೋಸ್ಟ್, ಮೈಸೂರು ಜಿಲ್ಲೆ ಇವರ ಸಂಸ್ಥೆಗೆ 1) Ancient Tibetan Language 2) Ancient Philosophy ಮತ್ತು 3) Ancient Psychology ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳುವ ಸಂಬಂಧ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/5.5 | ಕ್ರಿಶ್ಚಿಯಾನಿಟಿ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | **ಕ್ರಿಶ್ಚಿಯಾನಿಟಿ ಅಧ್ಯಯನ ಪೀಠಕ್ಕೆ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/-ಗಳ ಗೌರವ ಸಂಭಾವನೆಯೊಂದಿಗೆ ಡಾ. ಅಣ್ಣಮ್ಮ ಎಂ.ಎ. ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/5.6 | ಶ್ರೀ ನಿಖಿಲ್‌ಗೌಡ ಜೆ., ಪರಿಚಾರಕ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಸಂಬಂಧ ಶಿಸ್ತುಕ್ರಮ ಜರುಗಿಸುವ ಬಗ್ಗೆ. |
| | ಶ್ರೀ ಎನ್.ಶಂಕರ್‌ರವರು ಮಾತನಾಡಿ, ಶ್ರೀ ನಿಖಿಲ್‌ಗೌಡ ಜೆ ಇವರು ಎರಡು ವರ್ಷ ಆರು ತಿಂಗಳಿಂದ ಅನಧಿಕೃತ ಗೈರುಹಾಜರಾಗಿದ್ದು, ಇವರ ಗೈರುಹಾಜರಿಯ ಕುರಿತು ಹಿಂದಿನ ಯಾವ ಸಭೆಯಲ್ಲಿಯೂ ಚರ್ಚಿಸಿರುವುದಿಲ್ಲವೆಂದು ತಿಳಿಸಿದರು. ವಿಶ್ವವಿದ್ಯಾನಿಲಯದಿಂದ ಯಾವ ಅವಧಿಯಿಂದ ವೇತನವನ್ನು ಸ್ಥಗಿತಗೊಳಿಸಲಾಗಿದೆಯೆಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ಶ್ರೀ ನಿಖಿಲ್‌ಗೌಡ ಜೆ., ಪರಿಚಾರಕ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 02-02-2023ರಿಂದ ಈ ತಹಲ್‌ವರೆವಿಗೂ ಕಛೇರಿಗೆ ಅನಧಿಕೃತವಾಗಿ ಗೈರುಹಾಜರಾಗಿದ್ದು, ಅನಧಿಕೃತ ಗೈರುಹಾಜರಿಯ ಸಂಬಂಧ ಆರೋಪಣಾ ಮತ್ತು ದೋಷಾರೋಪಣಾ ಪಟ್ಟಿಯನ್ನು ಪ್ರತಿರಕ್ಷಣೆ ಹೇಳಿಕೆ ನೀಡುವ ಸಲುವಾಗಿ ನೋಂದಾಯಿತ ಅಂಚೆ ಮೂಲಕ ಸದರಿಯವರು ವಿಳಾಸಕ್ಕೆ ರವಾನಿಸಲಾಗಿದ್ದು, ಸದರಿಯವರು ಸ್ವೀಕರಿಸದೇ ವಾಪಸ್ ಬಂದಿರುತ್ತದೆ. ಆದ್ದರಿಂದ |

| | |
|---|---|
| | ಸದರಿಯವರ ಗೈರುಹಾಜರಿಯ ಕುರಿತು ಪ್ರತಿರಕ್ಷಣೆ ಹೇಳಿಕೆ ಕುರಿತು ಮನವಿ ಸಲ್ಲಿಸಲು ಕಡೆಯದಾಗಿ ಕಾಲವಕಾಶ ನೀಡುವ ಸಲುವಾಗಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕಾರ 9(5) (a) ಅನ್ವಯ ಒಬ್ಬ ಖಾಯಂ ಉದ್ಯೋಗಿ ಎಷ್ಟು ಅವಧಿಯವರೆಗೆ ಅನಧಿಕೃತವಾಗಿ ಗೈರುಹಾಜರಾದರೆ cause of action ಯಾವಾಗ ಪ್ರಾರಂಭವಾಗುತ್ತದೆ ಅಂದರೆ ಒಂದು ವಾರ, ಹತ್ತು ದಿನ, ಹದಿನೈದು ಅಥವಾ ಒಂದು ತಿಂಗಳು ಎಲ್ಲಿಂದ ಪ್ರಾರಂಭವಾಗುತ್ತದೆಯೆಂದು ಕೇಳಿದರು.<br><br>ಕುಲಸಚಿವರು ಮಾತನಾಡಿ, ಖಾಯಂ ಉದ್ಯೋಗಿ ಎರಡು ವಾರಗಳ ಕಾಲ ಅನಧಿಕೃತ ಗೈರುಹಾಜರಾದಲ್ಲಿ ನೋಟಿಸ್ ಜಾರಿ ಮಾಡಿ ಸಕಾರಣದೊಂದಿಗೆ ಪ್ರತ್ಯುತ್ತರವನ್ನು ಪಡೆಯುವುದು ಆಯಾ ಬಟವಾಡೆ ಅಧಿಕಾರಿಯವರ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಹದಿನೈದು ದಿನಗಳವರೆಗೆ ಅನಧಿಕೃತವಾಗಿ ಗೈರುಹಾಜರಾದಲ್ಲಿ ಸಿಸಿಎ ಅಧಿನಿಯಮದ ಪ್ರಕಾರ ಆರೋಪಣಾ ಮತ್ತು ದೋಷರೋಪಣಾ ಪಟ್ಟಿಯನ್ನು ಜಾರಿ ಮಾಡಬಹುದೆಂದು ತಿಳಿಸಿದರು. ನೋಟಿಸ್‌ಗೆ ಯಾವುದೇ ಸಕಾರಣ ಉತ್ತರವನ್ನು ನೀಡದೆ ಇರುವುದರಿಂದ ಕೆಸಿಎಸ್‌ಆರ್ ನಿಯಮದ ಪ್ರಕಾರ ಕ್ರಮ ತೆಗೆದುಕೊಳ್ಳಬಹುದೆಂದು ತಿಳಿಸಿದರು. ನೋಟಿಸ್ ಜಾರಿ ಮಾಡುವ ಹಂತದಲ್ಲಿ ಬಟವಾಡೆ ಅಧಿಕಾರಿಗಳು ಯಾವುದೇ ಕ್ರಮವಹಿಸಿಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಎರಡು ವರ್ಷದಿಂದ ಅನಧಿಕೃತವಾಗಿ ಗೈರುಹಾಜರಾಗಿರುವ ಶ್ರೀ ನಿಖಿಲ್‌ಗೌಡ. ಜೆ ಇವರನ್ನು ಕರ್ತವ್ಯದಲ್ಲಿ ಉಳಿಸಿಕೊಂಡಿರುವುದು ತಪ್ಪು ಹಾಗೂ ಅನಧಿಕೃತ ಗೈರುಹಾಜರಾಗಿರುವುದರಿಂದ ಶಿಕ್ಷೆಯನ್ನು ನೀಡಬೇಕೆಂದು ತಿಳಿಸಿದರು. ಸದರಿಯವರು 15 ದಿನಗಳ ಕಾಲ ಗೈರುಹಾಜರಾಗಿದ್ದ ಅವಧಿಯಲ್ಲಿ ಕ್ರಮ ಕೈಗೊಳ್ಳದೆ ಇರುವ ಬಟವಾಡೆ ಅಧಿಕಾರಿಗೆ ನೋಟಿಸ್ ಜಾರಿ ಮಾಡಿ ಎಂದು ತಿಳಿಸಿದರು. ಮುಂದುವರೆದು, ಖಾಯಂ/ ತಾತ್ಕಾಲಿಕ ಉದ್ಯೋಗಿಗಳು ಪೂರ್ವಾನುಮತಿಯಿಲ್ಲದೆ ಅನಧಿಕೃತವಾಗಿ ಗೈರುಹಾಜರಾದಲ್ಲಿ ತಕ್ಷಣ ಕುಲಸಚಿವರಿಗೆ ವಿಭಾಗಾಧ್ಯಕ್ಷರು/ಮುಖ್ಯಸ್ಥರು ಮಾಹಿತಿಯನ್ನು ನೀಡಬೇಕು. ಇಲ್ಲದಿದ್ದಲ್ಲಿ ಅವರನ್ನು ನೇರ ಹೊಣೆಗಾರರನ್ನಾಗಿಸಿ ಅವರಿಗೆ ನೋಟಿಸ್ ಜಾರಿ ಮಾಡಲಾಗುವುದು ಎಂಬುದಾಗಿ ಸುತ್ತೋಲೆಯನ್ನು ಹೊರಡಿಸಿ ಎಂದು ಸಲಹೆ ನೀಡಿದರು.<br><br>ಕುಲಸಚಿವರು ಮಾತನಾಡಿ, ಶ್ರೀ ನಿಖಿಲ್‌ಗೌಡ ಜೆ ಇವರಿಗೆ ಹೆಚ್‌ಎಂಆರ್‌ಎಸ್ ಮೂಲಕ ವೇತನ ಬಿಡುಗಡೆಯಾಗುತ್ತಿತ್ತು. ನಂತರದಲ್ಲಿ ವೇತನವನ್ನು ಸ್ಥಗಿತಗೊಳಿಸಲಾಗಿದೆ. ಕೆಸಿಎಸ್‌ಆರ್ ಪ್ರಕಾರ ಕರ್ತವ್ಯಕ್ಕೆ ಗೈರುಹಾಜರಾಗಿರುವವರಿಗೆ ನೋಟಿಸ್ ನೀಡಿ ಕ್ರಮವಹಿಸುವುದು ಬಟವಾಡೆ ಅಧಿಕಾರಿಯವರ ಜವಾಬ್ದಾರಿಯಾಗಿರುತ್ತದೆ. ನಂತರ ಮುಂದಿನ ಕ್ರಮಕ್ಕಾಗಿ ಕುಲಸಚಿವರಿಗೆ ಕಡತವನ್ನು ಮಂಡಿಸಬೇಕಾಗಿರುತ್ತದೆಯೆಂದು ತಿಳಿಸಿದರು. |
| ತೀರ್ಮಾನ | **ಶ್ರೀ ನಿಖಿಲ್‌ಗೌಡ ಜೆ., ಪರಿಚಾರಕ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವಿರುದ್ಧ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಸಿಸಿಎ ಅಧಿನಿಯಮ 1983ರ ಪ್ರಕಾರ 9(5) (a) ಅನ್ವಯ ವಿಚಾರಣೆಯನ್ನು ಕೈಗೊಳ್ಳಲು ಮಾನ್ಯ ಕುಲಪತಿಗಳು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

| | |
|---|---|
| ಸಾಮಾನ್ಯ ಸಭೆ 2025/5.7 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎನ್.ಎಸ್.ಹರಿನಾರಾಯಣ, ಪ್ರಾಧ್ಯಾಪಕರು, ಇವರನ್ನು ದಿನಾಂಕ: 05-10-2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/5.8 | ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ನಿರ್ದೇಶಕರನ್ನಾಗಿ ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎಸ್.ನರೇಂದ್ರ ಕುಮಾರ್, ಪ್ರಾಧ್ಯಾಪಕರು ಇವರನ್ನು ದಿನಾಂಕ: 05-10-2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ನಿರ್ದೇಶಕರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/5.9 | ಸಮಾಜಕಾರ್ಯ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಆರ್.ಶಿವಪ್ಪ, ಪ್ರಾಧ್ಯಾಪಕರು ಇವರನ್ನು ದಿನಾಂಕ: 05-10-2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಸಮಾಜಕಾರ್ಯ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| ಸಾಮಾನ್ಯ ಸಭೆ 2025/5.10 | ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಮಾಡುವ ಬಗ್ಗೆ. |
| | ಪ್ರೊ. ಮಹದೇವ, ನಿವೃತ್ತ ಪ್ರಾಧ್ಯಾಪಕರು, ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಾರ್ಗದರ್ಶನದಲ್ಲಿ ಸಂಶೋಧನಾ ಕಾರ್ಯನಿರ್ವಹಿಸುತ್ತಿರುವ ಕವಿತ ಎಲ್ ರವರ ಸಂಶೋಧನಾ ಅವಧಿಯು ದಿನಾಂಕ 14-09-2023ರಂದು ಏಳು ವರ್ಷಗಳು ಪೂರ್ಣಗೊಂಡಿದ್ದು, ವೈಯಕ್ತಿಕ ಹಾಗೂ ಅನಾರೋಗ್ಯದ ಕಾರಣಗಳಿಂದಾಗಿ ಸಂಶೋಧನೆಯನ್ನು ಪೂರ್ಣಗೊಳಿಸಿ ಮಹಾಪ್ರಬಂಧವನ್ನು ಸಲ್ಲಿಸಲು ಸಾಧ್ಯವಾಗದ ಕಾರಣದಿಂದ ದಿನಾಂಕ 24-04-2025 ರಂದು ಮಾನ್ಯ ಕುಲಪತಿಯವರಲ್ಲಿ ಮಹಾ ಪ್ರಬಂಧವನ್ನು ಸಲ್ಲಿಸಲು ಹೆಚ್ಚುವರಿ 06 ತಿಂಗಳು ಕಾಲಾವಕಾಶವನ್ನು ನೀಡುವಂತೆ ಮನವಿ ಮಾಡಿರುವುದನ್ನು ಕುಲಸಚಿವರು (ಪರೀಕ್ಷಾಂಗ) ಇವರು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | **ಶ್ರೀಮತಿ ಕವಿತ ಎಲ್, ಸಂಶೋಧನಾ ವಿದ್ಯಾರ್ಥಿ, ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಮಹಾಪ್ರಬಂಧವನ್ನು ಸಲ್ಲಿಸಲು ಒಂದು ಲಕ್ಷ ರೂಪಾಯಿಗಳ ದಂಡ ಶುಲ್ಕದೊಂದಿಗೆ ಆರು ತಿಂಗಳ ಕಾಲಾವಕಾಶ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

| | |
|---|---|
| **ಸಾಮಾನ್ಯ ಸಭೆ 2025/5.11** | 2024-25ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಕಾಯ್ದೆ 2000 ಸೆಕ್ಷನ್ 47 (2)ರ ಪ್ರಕಾರ 2024-25ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/5.12** | ಡಾ. ಎಂ. ವಾಸಂತಿ, ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಿರುವುದನ್ನು ಹಿಂಪಡೆಯುವ ಅಥವಾ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಡಾ. ಎಂ.ವಾಸಂತಿ ಇವರು ದಿನಾಂಕ 26-12-2024ರ ಮನವಿ ಪತ್ರದಲ್ಲಿ ಘನ ನ್ಯಾಯಾಲಯದ ಆದೇಶದ ಅನ್ವಯ ದಂಡ ಮೊತ್ತವಾದ ಐದು ಲಕ್ಷ ರೂಪಾಯಿಗಳನ್ನು ದೂರುದಾರರಿಗೂ ಹಾಗೂ 10 ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಪಾವತಿಸಿದ್ದು, ಸದರಿಯವರ ವಿರುದ್ಧ ದಾಖಲಾಗಿದ್ದ ಪ್ರಕರಣವು ಮುಕ್ತಾಯಗೊಂಡಿದ್ದು, ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲವೆಂದು ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಡಾ. ಎಂ.ವಾಸಂತಿ ಅವರ ವೈಯಕ್ತಿಕ ಪ್ರಕರಣವಾಗಿರುವುದೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಕೆಸಿಎಸ್‌ಆರ್ ನಿಯಮಾವಳಿ ಪ್ರಕಾರ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕಾಯ್ದೆಯನ್ವಯ ಡಾ.ವಾಸಂತಿಯವರ ವೈಯಕ್ತಿಕ ವಿಷಯವಾಗಿದ್ದರೂ ಸಹ ಇಲಾಖಾ ವಿಚಾರಣೆಯನ್ನು ಕೈಗೊಂಡು, ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ನೇಮಕ ಮಾಡಿ ಅಂತಿಮ ತೀರ್ಮಾನವಾಗಿ ವಾಗ್ದಂಡನೆ ಅಥವಾ ಒಂದು ಅಥವಾ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಕಡಿತಗೊಳಿಸಬಹುದು ಹಾಗೂ ವಿಚಾರಣೆಯನ್ನು ಬದಿಗೊತ್ತಿ ವಿಶ್ವವಿದ್ಯಾನಿಲಯದ ಕಾಯ್ದೆಯನ್ವಯ ಕ್ರಮ ಕೈಗೊಳ್ಳುವುದು ಸೂಕ್ತವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದು ಕಾರಾಗೃಹಕ್ಕೆ ಹೋಗಿ ಬಂದಿರುವುದು ತಪ್ಪು ಆದ್ದರಿಂದ ಅವರು ಮಾಡಿರುವ ತಪ್ಪಿಗೆ ಶಿಕ್ಷೆಯಾಗಬೇಕಾಗಿದೆ. ಈ ಹಿನ್ನೆಲೆಯಲ್ಲಿ ವಾಗ್ದಂಡನೆ ಅಥವಾ ವೇತನ ಬಡ್ತಿಗಳನ್ನು ಕಡಿತಗೊಳಿಸಬಹುದೆಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಂದ 32 ಲಕ್ಷ ರೂಪಾಯಿಗಳು ವಿಶ್ವವಿದ್ಯಾನಿಲಯಕ್ಕೆ ಪಾವತಿಯಾಗಬೇಕಾಗಿರುತ್ತದೆ. ಡಾ. ವಾಸಂತಿ ಯವರು ಶಿಕ್ಷಕ ಸಲಹೆಗಾರರಾಗಿದ್ದ ಅವಧಿಯಲ್ಲಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಂದ ಬೇಬಾಕಿ ವಸೂಲಾತಿ ಮಾಡದೇ ವಿದ್ಯಾರ್ಥಿಗಳಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆಂದು ಆರೋಪವಿದೆ. ಆದ್ದರಿಂದ ಬಾಕಿ ವಸೂಲಾತಿಗೆ ಕುಲಸಚಿವರು ಕ್ರಮವಹಿಸಬೇಕೆಂದು ಕೋರಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸದರಿಯವರಿಗೆ ಎಚ್ಚರಿಕೆ ನೋಟಿಸ್ ಜಾರಿಗೊಳಿಸಬೇಕು. ಸದರಿಯವರು ಬಾಕಿ ವಸೂಲಾತಿ ಮಾಡದೇ ವಿದ್ಯಾರ್ಥಿಗಳಿಗೆ ನಿರಾಕ್ಷೇಪಣಾ ಪತ್ರವನ್ನು ನೀಡಿರುವುದರಿಂದ, ಈ ವಿಷಯವನ್ನು ಕುಲಸಚಿವರು ಗಂಭೀರವಾಗಿ ಪರಿಗಣಿಸಿ ಮುಂದಿನ ಸಿಂಡಿಕೇಟ್‌ನಲ್ಲಿ ಕಾರ್ಯಸೂಚಿಯಾಗಿ ಮಂಡಿಸಬೇಕೆಂದು ತಿಳಿಸಿದರು.<br><br>ಡಾ. ನಟರಾಜ್ ಹೆಚ್.ಎಸ್. ರವರು ಮಾತನಾಡಿ, ಡಾ.ವಾಸಂತಿಯವರ ವಿರುದ್ಧ ಈ ವಿಷಯದ ಕುರಿತು ಆರೋಪಗಳಿವೆಯೆಂದು ತಿಳಿಸಿದರು. |

| | |
|---|---|
| | ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಡಾ. ವಾಸಂತಿಯವರಿಗೆ ಒಂದು ವೇತನ ಬಡ್ತಿಯನ್ನು ಕಡಿತಗೊಳಿಸಿ ಎಂದು ತಿಳಿಸಿದರು. |
| **ತೀರ್ಮಾನ** | **ಡಾ. ಎಂ. ವಾಸಂತಿ, ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪ್ರಕರಣವು ಈಗಾಗಲೇ ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವುದರಿಂದ ಇವರಿಗೆ ಇಲಾಖಾ ವಿಚಾರಣೆಯನ್ನು ಕೈಗೊಳ್ಳದೆ ಎಚ್ಚರಿಕೆ ನೋಟಿಸ್ ಜಾರಿ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ತೊಂದರೆಯಾಗದಂತೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಕಡಿತಗೊಳಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/5.13** | ಇಂಡಸ್ ಟವರ್ ಪ್ರೈ. ಲಿಮಿಟೆಡ್ ಇವರಿಗೆ ಮಾನಸಗಂಗೋತ್ರಿ ಹಾಗೂ ಯುವರಾಜ ಕಾಲೇಜು ಆವರಣದಲ್ಲಿ ಮೊಬೈಲ್ ಟವರ್ ಅಳವಡಿಸಲು ಖಾಲಿ ನಿವೇಶನ ನೀಡುವ ಬಗ್ಗೆ. |
| | ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ಈ ಪ್ರಸ್ತಾವನೆ ಯಾವ ಹಂತದಲ್ಲಿದೆ, ವಿಶ್ವವಿದ್ಯಾನಿಲಯವು ಯಾವುದಾದರೂ ವಚನ ಅಥವಾ ಲಿಖಿತ ಬದ್ಧತೆಗೆಗೊಳಗಾಗಿದೆಯೇ ಎಂದು ಕೇಳಿದರು.<br><br>ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಚರ ಮತ್ತು ಸ್ಥಿರಾಸ್ತಿಗಳನ್ನು ಬಾಡಿಗೆಗೆ ಕೊಡುವ ಮೊದಲು ವಿಷಯವನ್ನು ಸಿಂಡಿಕೇಟ್‌ನಲ್ಲಿ ಮಂಡಿಸಲಾಗುತ್ತದೆಯೆಂದು ತಿಳಿಸಿದರು. ಯಾವುದೇ ಬದ್ಧತೆಗೆಗೊಳಗಾಗಿಲ್ಲವೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ವಿದ್ಯಾರ್ಥಿಗಳು ಪ್ರವೇಶಾತಿ ಶುಲ್ಕವನ್ನು ಆನ್‌ಲೈನ್‌ನಲ್ಲಿ ಪಾವತಿ ಮಾಡುತ್ತಿದ್ದು, ಕೆಲವೊಂದು ವಿಭಾಗದಲ್ಲಿ ನೆಟ್‌ವರ್ಕ್ ಸಮಸ್ಯೆಯಿಂದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಇಂಡಸ್ ಟವರ್ ಪ್ರೈ.ಲಿಮಿಟೆಡ್‌ರವರು ಮೊಬೈಲ್ ಟವರ್ ಅಳವಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಪ್ರಸ್ತಾವನೆ ಯಾರಿಂದ ಬಂತು ಹಾಗೂ ವಿಷಯವು ಅಪೂರ್ಣವಾಗಿದೆಯೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ನೆಟ್‌ವರ್ಕ್ ಸಮಸ್ಯೆಯಿರುವುದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೊಬೈಲ್ ಟವರ್ ಅಳವಡಿಸಲು ಖಾಲಿ ನಿವೇಶನ ಬಾಡಿಗೆಗೆ ನೀಡುತ್ತಿರುವುದಾಗಿ ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಇದು ಮೂಲಭೂತ ಸೌಕರ್ಯವಲ್ಲ. ನೆಟ್‌ವರ್ಕ್ ಸಮಸ್ಯೆಗೆ ಟವರ್ ಅಳವಡಿಸುವುದು ಪರಿಹಾರವಲ್ಲ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಪ್ರಕಾರ ವಿಶ್ವವಿದ್ಯಾನಿಲಯ ಕಾರ್ಯನಿರ್ವಹಿಸುತ್ತಿದೆ. ಆದುದರಿಂದ ವಿಶ್ವವಿದ್ಯಾನಿಲಯ ಕಾಯ್ದೆ ಪ್ರಕರಣ 3 ಮತ್ತು 4ಕ್ಕೆ ನಾವು ಬದ್ಧರಾಗಿರಬೇಕು. ಪ್ರಕರಣ 4ರಲ್ಲಿ ವಿಶ್ವವಿದ್ಯಾನಿಲಯವು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದುಕೊಳ್ಳದೆ ಯಾವುದೇ ಸ್ಥಿರ ಸ್ವತ್ತನ್ನು ಗುತ್ತಿಗೆ, ಮಾರಾಟ ಅಥವಾ ವರ್ಗಾವಣೆ ಮಾಡಬಾರದೆಂದಿದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸದರಿ ಕಂಪನಿಗೆ ಬಾಡಿಗೆಗೆ ಮಾತ್ರ ನೀಡಲಾಗುತ್ತಿದೆಯೆಂದು ಹಾಗೂ ಯಾವುದೇ ಅನಾನುಕೂಲ ಕಂಡು ಬಂದಲ್ಲಿ ಕರಾರು ಒಪ್ಪಂದವನ್ನು ರದ್ದು ಮಾಡಲಾಗುವುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ ಗುತ್ತಿಗೆ ಅಂದರೆ ಬಾಡಿಗೆ ಪಡೆಯುತ್ತೀರಾ ಎಂದು ಕೇಳಿದರು. |

| | |
|---|---|
| | ಕುಲಸಚಿವರು ಮಾತನಾಡಿ, ಶಾಶ್ವತವಾಗಿ ನೀಡುತ್ತಿಲ್ಲ, ಬಾಡಿಗೆಗೆ ನೀಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆದಾಯ ಬರುತ್ತದೆಯೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸದರಿ ಕಂಪನಿಯವರು ಹನ್ನೊಂದು ತಿಂಗಳಿಗೆ ಮಾತ್ರ ಬಾಡಿಗೆ ಪಡೆಯುವರಲ್ಲ. ಇವರು ಹತ್ತು ವರ್ಷಗಳ ಅವಧಿಯವರೆಗೆ ಇರುತ್ತಾರೆ. ಆದ್ದರಿಂದ ಖಾಸಗಿಯವರಿಗೆ ನೀಡುವ ಬದಲು ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್‌ರವರಿಗೆ ನೀಡುವುದು ಸೂಕ್ತವೆಂದರು.<br><br>ಶ್ರೀ ನಾಗರಾಜು ಸಿ.ರವರು ಮಾತನಾಡಿ, ಹಿಂದಿನ ಕುಲಸಚಿವರು ಖಾಸಗಿಯವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಟವರ್ ಅಳವಡಿಸಲು ಕೋರಿರುತ್ತಾರೆ, ಬಿಎಸ್‌ಎನ್‌ಎಲ್‌ರವರಿಗೆ ಮಾತ್ರ ನೀಡಬಹುದು. ಏಕೆಂದರೆ ವಿಶ್ವವಿದ್ಯಾನಿಲಯವು ಸರ್ಕಾರದ ವ್ಯಾಪ್ತಿಗೆ ಒಳಪಡುತ್ತದೆಯೆಂದು ತಿಳಿಸಿದ್ದರೆಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಬಿಎಸ್‌ಎನ್‌ಎಲ್‌ರವರು ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಬೂಸ್ಟರ್ ಅಳವಡಿಸಿದ್ದರು. ಆದರೆ ಅದು ಸರಿಯಾಗಿ ಕಾರ್ಯನಿರ್ವಹಿಸಲಿಲ್ಲವೆಂದು ಹಾಗೂ ತಗಲುವ ವೆಚ್ಚವೂ ದುಬಾರಿ ಆಗಿರುತ್ತದೆಯೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ,. ಎನ್‌ಜಿಓ ರವರು ವಸತಿಗೃಹವನ್ನು ಬಾಡಿಗೆಗೆ ಕೋರಿದ್ದರು. ಅದನ್ನು ತಿರಸ್ಕರಿಸಲಾಯಿತೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಇಂಡಸ್ ಟವರ್ ಪ್ರೈ.ಲಿಮಿಟೆಡ್, ಗುರುಗಾವ್ ಸಂಸ್ಥೆಯವರಿಗೆ ನೀಡುವ ಬದಲು ವಿಶ್ವವಿದ್ಯಾನಿಲಯದಲ್ಲಿ ಟವರ್ ಅಳವಡಿಸುವ ಕಂಪನಿಗಳ ವಿವರಗಳನ್ನು ಗೂಗಲ್‌ನಲ್ಲಿ ಪಡೆದು ಕಂಪನಿಗಳನ್ನು ಸಂಪರ್ಕಿಸಿ ಎಷ್ಟು ಬಾಡಿಗೆಯನ್ನು ನೀಡುತ್ತಾರೆ ಹಾಗೂ ಅವರ ಷರತ್ತುಗಳ ವಿವರಗಳನ್ನು ಪಡೆದು, ಯಾವ ಕಂಪನಿ ಉತ್ತಮವಾಗಿದೆಯೆಂದು ಆಯ್ಕೆ ಮಾಡಿ ಎಷ್ಟು ಬಾಡಿಗೆಗೆ ನೀಡುವ ಕರಾರಿನ ಬಗ್ಗೆ ಸವಿಸ್ತಾರವಾಗಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವಂತೆ ಸಲಹೆ ನೀಡಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೊಬೈಲ್ ಟವರ್ ಅಳವಡಿಸುತ್ತಿರುವುದೆಂದು ತಿಳಿಸಿದರು<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಖಾಸಗಿ ವ್ಯಕ್ತಿಗಳು ಬರಬಾರದು ಎಂಬುದು ತಮ್ಮ ಅನಿಸಿಕೆಯೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಟವರ್ ಅಳವಡಿಸುವುದರಿಂದ ಅನುಕೂಲ ಹಾಗೂ ಅನಾನುಕೂಲವೇನೆಂದು ತಿಳಿಸಿ ಎಂದು ಕೇಳಿದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಮೊಬೈಲ್ ಟವರ್‌ನಿಂದ ಹೊರಹೊಮ್ಮುವ ವಿಕಿರಣಗಳಿಂದ ಆರೋಗ್ಯ ಸಮಸ್ಯೆ ಉದ್ಭವವಾಗುವುದರಿಂದ ಎಚ್ಚರಿಕೆಯನ್ನು ವಹಿಸಬೇಕೆಂದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಖಾಸಗಿ ಸಂಸ್ಥೆಗೆ ನೀಡಿದಲ್ಲಿ ಅವರನ್ನು ಖಾಲಿ ಮಾಡಿಸುವುದು ಅಸಾಧ್ಯವಾಗುತ್ತದೆ. ಆದ್ದರಿಂದ ಖಾಸಗಿ ಸಂಸ್ಥೆಯವರಿಗೆ ನೀಡುವ ಮೊದಲು ವಿಶ್ವವಿದ್ಯಾನಿಲಯವು ಸರ್ಕಾರದಿಂದ ಪೂರ್ವಾನುಮತಿ ಪಡೆಯುವುದು ಸೂಕ್ತವೆಂದು ತಿಳಿಸಿದರು. |

| | | |
|---|---|---|
| | ಡಾ. ನಟರಾಜ್ ಹೆಚ್.ಎಸ್.ರವರು ಮಾತನಾಡಿ, ವಿದ್ಯಾರ್ಥಿಗಳು ನೆಟ್‌ವರ್ಕ್ ಸಮಸ್ಯೆಯಿಂದ ಪ್ರವೇಶಾತಿ ಶುಲ್ಕ/ಇತರೆ ಯಾವುದೇ ಶುಲ್ಕವನ್ನು ಸಕಾಲದಲ್ಲಿ ಪಾವತಿಸಲು ಸಾಧ್ಯವಾಗುತ್ತಿಲ್ಲ. ಬ್ಯಾಂಕ್‌ನಲ್ಲಿ ಹಣ ಪಾವತಿ ಮಾಡಲು ಗಂಟೆಗಟ್ಟಲೆ ಸಾಲಿನಲ್ಲಿ ನಿಲ್ಲಬೇಕಾಗುತ್ತದೆಯೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಏರ್‌ಟೆಲ್ ಹಾಗೂ ಬಿಎಸ್‌ಎನ್‌ಎಲ್‌ರವರು ಯಾರು ಟವರ್ ಅಳವಡಿಸುತ್ತಿಲ್ಲವೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಇಂಡಸ್ ಟವರ್ ಪ್ರೈ.ಲಿಮಿಟೆಡ್ ರವರಿಗೆ ನೀಡುವ ಬದಲು ಹೆಚ್ಚಿಗೆ ಬಾಡಿಗೆ ನೀಡುವ ಕಂಪನಿಯವರಿಗೆ ನೀಡುವುದು ಸೂಕ್ತವೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಒಂದು ಖಾಸಗಿ ಸಂಸ್ಥೆಗೆ ನೀಡಿದರೆ ಇದನ್ನು ಉದಾಹರಣೆಯಾಗಿ ತೆಗೆದುಕೊಂಡು ಹಲವು ಖಾಸಗಿ ಸಂಸ್ಥೆಯವರು ವಿಶ್ವವಿದ್ಯಾನಿಲಯಕ್ಕೆ ಬರುತ್ತಾರೆ. ಬಿಎಸ್‌ಎನ್‌ಎಲ್ ರವರಿಂದ ಅಭಿಪ್ರಾಯವನ್ನು ತೆಗೆದುಕೊಳ್ಳಿ ನಮ್ಮ ಸಮಸ್ಯೆಗೆ ಪರಿಹಾರವನ್ನು ನೀಡುತ್ತಾರೋ ಆ ಸಲಹೆಯನ್ನು ಪಾಲಿಸುವುದು ಸೂಕ್ತವೆಂದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, Eviction of Towerಗೆ ಸಂಬಂಧಿಸಿದಂತೆ ಮೈಸೂರು/ಕರ್ನಾಟಕ ಉಚ್ಚ ನ್ಯಾಯಾಲಯ/ಸುಪ್ರೀಂ ಕೋರ್ಟ್‌ನಲ್ಲಿ ನಿರ್ಣಯಗಳಾಗಿರುವ ಮಾಹಿತಿಯನ್ನು ಕಾನೂನು ಘಟಕದಿಂದ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಸರ್ವೀಸ್ ನೀಡುವವರಿಗೆ ಪತ್ರ ಬರೆದು ಸದರಿಯವರಿಂದ ಉತ್ತಮರಾರೆಂದು ಆಯ್ಕೆ ಮಾಡುವುದು ಸೂಕ್ತವೆಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ಬಾಡಿಗೆ ಹೆಚ್ಚಿಗೆ ಪಾವತಿಸುವವರಿಗೆ ನೀಡಿ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ HDFC ಬ್ಯಾಂಕ್‌ನವರು customized software ಒದಗಿಸಿರುತ್ತಾರೆಂದು ಹಣಕಾಸು ಅಧಿಕಾರಿಗಳು ತಿಳಿಸಿರುತ್ತಾರೆ. ಡಾ. ಟಿ.ಆರ್. ಚಂದ್ರಶೇಖರ್‌ರವರು HDFC ಬ್ಯಾಂಕ್‌ನವರನ್ನೇ ಏಕೆ ಆಯ್ಕೆ ಮಾಡಿಕೊಂಡಿದ್ದಿರೆಂದು ಪ್ರಶ್ನಿಸಿದ್ದಾಗ, ಮಾನ್ಯ ಕುಲಪತಿಯವರು HDFC ಬ್ಯಾಂಕ್‌ನವರಿಗೆ ಕೊಡಬೇಕೆಂದಿಲ್ಲ. expression of interest ಎಲ್ಲಾ ಬ್ಯಾಂಕ್‌ನವರಿಂದ ತರಿಸಿಕೊಂಡು ಯಾವ ಬ್ಯಾಂಕ್‌ನವರು ಉತ್ತಮ ಸೌಲಭ್ಯಗಳನ್ನು ನೀಡುತ್ತಾರೆ ಅವರಿಗೆ ನೀಡಲಾಗುವುದೆಂದು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಈ ವಿಷಯದ ಕುರಿತು ಅದೇ ರೀತಿಯ ನಿರ್ಧಾರವನ್ನು ತೆಗೆದುಕೊಳ್ಳಿ ಹಾಗೂ ಹತ್ತಾರು ಕಂಪನಿಗಳಿಂದ ಪ್ರಸ್ತಾವನೆಯನ್ನು ಪಡೆದುಕೊಳ್ಳಿ ಎಂದು ತಿಳಿಸಿದರು. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಆವರಣದಲ್ಲಿ ಮೊಬೈಲ್ ಟವರ್ ಅಳವಡಿಸುವ ಸಂಬಂಧ ಕಂಪನಿಗಳಿಂದ ದರಪಟ್ಟಿಯನ್ನು** (Expression of Interest) **ಪಡೆದು ಉತ್ತಮ ಸೌಲಭ್ಯ ಮತ್ತು ಹೆಚ್ಚಿನ ಬಾಡಿಗೆ ನೀಡುವವರನ್ನು ಗುರುತಿಸಿ ನಂತರ ಕ್ರಮವಹಿಸುವುದು ಸೂಕ್ತವೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

| | |
|---|---|
| **ಸಾಮಾನ್ಯ ಸಭೆ 2025/5.14** | ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಹಾಗೂ ಅನುಮೋದನೆ ಬಗೆಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ರ ಪ್ರಕರಣ 50(1)ರ ಪ್ರಕಾರ ಸಿದ್ಧಪಡಿಸಲಾಗಿರುವ ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ವರದಿಯ ಕರಡು ಪ್ರತಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/5.15** | 2022-23ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ |
| | ಕುಲಸಚಿವರು 2022-23ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣಿಗಳಿಗೆ ಅನುಪಾಲನಾ ವರದಿಯನ್ನು ಸಭೆಗೆ ಮಂಡಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ, 2022-23ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿಯಲ್ಲಿ ಯಾವುದಾದರೂ ಸಮಸ್ಯೆಗಳಿವೆಯೇ, ಸಮಸ್ಯೆಗಳಿದ್ದಲ್ಲಿ ಮುಂದೆ ಸರಿಪಡಿಸಿಕೊಳ್ಳಬಹುದಾದಂತಹ ವಿಷಯ ಯಾವುದಿದೆ ಎಂಬುದರ ಬಗ್ಗೆ ಹಣಕಾಸು ಅಧಿಕಾರಿಗಳ ಅಭಿಪ್ರಾಯವನ್ನು ಕೇಳಿದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಲೆಕ್ಕಪರಿಶೋಧನಾ ಅನುಪಾಲನಾ ವರದಿಯಲ್ಲಿ ಯಾವುದೇ ದುರ್ಬಳಕೆಗೆ ಸಂಬಂಧಿಸಿದ ಸಂಗತಿಗಳಿಲ್ಲ. ಕೆಲವೊಂದಕ್ಕೆ ದಾಖಲಾತಿಗಳನ್ನು ಒದಗಿಸದೆ ಇರುವಂತಹದ್ದು, ಹಣಕಾಸು ವಿಭಾಗದಲ್ಲಿ ಖಾತೆಗಳನ್ನು ವರ್ಗಾವಣೆ ಮಾಡಿರುವುದರಲ್ಲಿ, ಕಾಲೇಜಿನ ಶುಲ್ಕ ಹಾಗೂ ಹಾಸ್ಟೆಲ್‌ನ ಶುಲ್ಕವನ್ನು ಸಂಗ್ರಹಿಸಿಲ್ಲ ಎಂಬುದರ ಬಗ್ಗೆ ಆಕ್ಷೇಪಣೆಯಿತ್ತು. ಹಾಸ್ಟೆಲ್‌ನ ಶುಲ್ಕವನ್ನು ಈಗಾಗಲೇ ಸಂಗ್ರಹಿಸಿ ಖಾತೆಗೆ ವರ್ಗಾಯಿಸಲಾಗಿದೆ. ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಪ್ರವೇಶಾತಿ ಶುಲ್ಕವನ್ನು ಸಂಗ್ರಹಿಸಿರುವುದಿಲ್ಲ. ಸದರಿ ಶುಲ್ಕವನ್ನು ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಸಂಗ್ರಹಿಸಲಾಗುವುದು. ಟೆಂಡರ್‌ಗೆ ಸಂಬಂಧಿಸಿದ ಪ್ರಕ್ರಿಯೆಯು ಸದರಿ ಸಾಲಿನಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದಿರುವಂತಹ ಸಂದರ್ಭದಲ್ಲಿ ಮುಂದಿನ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುತ್ತದೆ. ಆದರೆ ಟೆಂಡರ್‌ಗೆ ಸಂಬಂಧಿಸಿದಂತೆ ಪ್ರತಿವರ್ಷ ಆಕ್ಷೇಪಣೆ ಇದ್ದೇಯಿರುತ್ತದೆ. ಹಾಗೂ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಮಂಜೂರಾಗುವ ಶುಲ್ಕಗಳು ನೇರವಾಗಿ ವಿದ್ಯಾರ್ಥಿಗಳ ಖಾತೆಗೆ ಜಮವಾಗುವುದರಿಂದ ವಿಶ್ವವಿದ್ಯಾನಿಲಯವು ಸದರಿ ವಿದ್ಯಾರ್ಥಿಗಳಿಂದ ಹಿಂಪಡೆಯಲು ಸಾಧ್ಯವಾಗದಿರುವುದರಿಂದ, ಸದರಿ ಮೊತ್ತವನ್ನು ಸಹ ಲೆಕ್ಕಪರಿಶೋಧಕರು ಆಕ್ಷೇಪಿಸಿರುತ್ತಾರೆ. ಲೆಕ್ಕಪರಿಶೋಧನಾ ಆಕ್ಷೇಪಣೆಗಳಲ್ಲಿ ಸರಿಪಡಿಸಿಕೊಳ್ಳಲಾಗುವಂತಹವುಗಳನ್ನು ಆಯಾ ಸಂದರ್ಭದಲ್ಲಿಯೇ ಸರಿಪಡಿಸಿಕೊಳ್ಳಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತರುತ್ತಾ, ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನದ ಬಗ್ಗೆ ಪ್ರತಿ ವರ್ಷ ಸುಮಾರು ರೂ.35 ರಿಂದ ರೂ. 40.00 ಕೋಟಿಗಳವರೆಗೆ ಆಕ್ಷೇಪಣೆಯಿರುತ್ತದೆ ಎಂದು ತಿಳಿಸುತ್ತ, ಈಗಾಗಲೇ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆಯನ್ನು ಪಡೆಯಲಾಗಿದ್ದು, ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದ ನಂತರ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದ ನಂತರ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಿದ್ಧಪಡಿಸಿರುವ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿಗಳನ್ನು ಸರ್ಕಾರಕ್ಕೆ ಕಳುಹಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.<br><br>ಶ್ರೀ ಮಹದೇಶು ಅವರು ಮಾತನಾಡಿ, ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಸರಿಯಾದ ಸೂಚಿತ ನಿಯಮಾವಳಿಗಳ ಪ್ರಕಾರ ಲೆಕ್ಕಪತ್ರಗಳನ್ನು |

ತಯಾರಿಸುತ್ತಿಲ್ಲವೆಂಬುದೇ ಮುಖ್ಯವಾದ ಆಕ್ಷೇಪಣೆಯಾಗಿದೆ. ಲೆಕ್ಕಪತ್ರದಲ್ಲಿ ಖರ್ಚು ಮತ್ತು ವೆಚ್ಚಗಳನ್ನು ಮಾತ್ರ ನಮೂದಿಸಲಾಗುತ್ತಿದೆ. ಬ್ಯಾಲೆನ್ಸ್ ಶೀಟ್ ಹಾಗೂ ಯಾವುದೇ ರೀತಿ ನೀತಿಯಲ್ಲಿ ಲೆಕ್ಕಪತ್ರವನ್ನು ಸಿದ್ಧಪಡಿಸಲಾಗುತ್ತಿಲ್ಲ. ಆದ್ದರಿಂದ ಲೆಕ್ಕಪತ್ರಗಳನ್ನು ಸೂಚಿತ ನಿಯಮಗಳ ಪ್ರಕಾರ ಸಿದ್ಧಪಡಿಸಲು ಯಾವ ಕ್ರಮವನ್ನು ಅನುಸರಿಸುತ್ತೀರಾ ಎಂದು ಕೇಳಿದರು. ಚಾರ್ಟರ್ಡ್ ಅಕೌಂಟೆಂಟ್ ಹತ್ತಿರ ಲೆಕ್ಕಪತ್ರಗಳನ್ನು ಸಿದ್ಧಪಡಿಸುತ್ತಿರುವುದು ಸರಿ. ಆದರೆ ವಿಶ್ವವಿದ್ಯಾನಿಲಯದ ತಮ್ಮ ವಿಭಾಗದಲ್ಲಿ ಬ್ಯಾಲೆನ್ಸ್‌ಶೀಟ್‌ನ್ನು ಸಿದ್ಧಪಡಿಸಲಾಗುತ್ತಿದೆಯೇ ಎಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, 2021-22ನೇ ಸಾಲಿನಿಂದ ಬ್ಯಾಲೆನ್ಸ್‌ಶೀಟ್‌ನ್ನು ಸಿದ್ಧಪಡಿಸಲಾಗುತ್ತಿದೆ, ಹಾಗೆಯೇ 2022-23ನೇ ಸಾಲಿನ ಬ್ಯಾಲೆನ್ಸ್ ಶೀಟ್ ಲೆಕ್ಕಪತ್ರಗಳನ್ನು ಸಿದ್ಧಪಡಿಸಲಾಗಿದೆ. 2023-24ನೇ ಸಾಲಿನ ಲೆಕ್ಕಪತ್ರಗಳನ್ನು ಅದೇ ಮಾದರಿಯಲ್ಲಿಯೇ ಸಿದ್ಧಪಡಿಸಲಾಗುವುದು ಎಂದು ಸಭೆಗೆ ತಿಳಿಸುತ್ತಾ, ಡಬ್ಬಲ್ ಎಂಟ್ರಿ ಸಿಸ್ಟಮ್‌ನಲ್ಲಿ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ನುರಿತ ಬೋಧಕೇತರ ಸಿಬ್ಬಂದಿಗಳು ನಮ್ಮಲ್ಲಿರುವುದಿಲ್ಲವೆಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ನುರಿತ ಬೋಧಕೇತರ ಸಿಬ್ಬಂದಿಗಳಿಂದ ತಾವು ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಅರ್ಹ ಬೋಧಕೇತರ ಸಿಬ್ಬಂದಿಗಳನ್ನು ತಮ್ಮ ವಿಭಾಗಕ್ಕೆ ವರ್ಗಾವಣೆ ಮಾಡಿಕೊಂಡು ಸೂಚಿತ ಲೆಕ್ಕಪತ್ರಗಳನ್ನು ಸಿದ್ಧಪಡಿಸಬೇಕೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಯುಯುಸಿಎಂಎಸ್‌ನಲ್ಲಿಯೇ ಅಕೌಂಟ್ಸ್‌ಗೆ ಸಂಬಂಧಿಸಿದ ಸಾಫ್ಟ್‌ವೇರ್ ಇರುವುದರಿಂದ ಯುಯುಸಿಎಂಎಸ್ ಸಾಫ್ಟ್‌ವೇರ್‌ನ್ನು ಅಳವಡಿಸಿಕೊಂಡು ಮುಂದಿನ ಲೆಕ್ಕಪತ್ರಗಳನ್ನು ಸಿದ್ಧಪಡಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ಬಜೆಟ್‌ನಲ್ಲಿ ಹಂಚಿಕೆ ಮಾಡಿರುವ ಮೊತ್ತಕ್ಕಿಂತ ಹೆಚ್ಚಿನ ಹಣವನ್ನು ಸುಮಾರು ರೂ. 32.00 ಕೋಟಿಗಳಷ್ಟು ವಿಶ್ವವಿದ್ಯಾನಿಲಯವು ಖರ್ಚು ಮಾಡಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಲೆಕ್ಕಪರಿಶೋಧಕರಿಗೆ ಎಲ್ಲಾ ಮಾಹಿತಿಗಳನ್ನು, ದಾಖಲೆಗಳನ್ನು ನೀಡಿದ್ದರೂ ಸಹ, ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲವೆಂದು ನಮೂದಿಸಿರುತ್ತಾರೆ. ಹಾಗೆಯೇ ಯುಯುಸಿಎಂಎಸ್‌ನಲ್ಲಿ ಶುಲ್ಕವನ್ನು ಪಾವತಿಸುವಾಗ ಸಾಫ್ಟ್‌ವೇರ್‌ನಲ್ಲಿ ಏನಾದರೂ ಅಡಚಣೆಯುಂಟಾದಲ್ಲಿ ಆಗ ಸಮಸ್ಯೆಗಳು ಉಂಟಾಗಬಹುದು, ಜಿವಿಟಿಯನ್ನು ರದ್ದುಪಡಿಸಿರುವುದು ಹಾಗೂ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು ಶುಲ್ಕವನ್ನು ಪಾವತಿಸಿಲ್ಲದಿರುವುದು ಇವೆಲ್ಲವೂ ಸಹ ಪ್ರತಿವರ್ಷವೂ ಆಕ್ಷೇಪಣೆಗೆ ಒಳಗಾಗುತ್ತಿದೆ ಎಂದು ಸಭೆಗೆ ತಿಳಿಸುತ್ತಾ, ಯಾವ ಮೊತ್ತವನ್ನು ವಸೂಲಾತಿ ಮಾಡಿಕೊಳ್ಳಲು ಸಾಧ್ಯವಿದೆಯೋ ಆ ಮೊತ್ತವೆಲ್ಲವನ್ನೂ ವಸೂಲಾತಿ ಮಾಡಲು ತಿಳಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶು ಅವರು ಮಾತನಾಡಿ, ಎಲ್‌ಐಸಿ ಕಾರ್ಪಸ್ ಫಂಡ್‌ನಲ್ಲಿ ಎಲ್‌ಐಸಿನವರು ರೂ. 52,96,000/-ಗಳನ್ನು ನಿರ್ವಹಣಾ ವೆಚ್ಚವೆಂದು ತೆಗೆದುಕೊಂಡಿರುತ್ತಾರೆ. ನಾವು ಠೇವಣಿಯಾಗಿಟ್ಟಿರುವ ಹಣಕ್ಕೆ ಯಾವುದೇ ಬ್ಯಾಂಕಾಗಲೀ ಅಥವಾ ಸಂಸ್ಥೆಯಾಗಲೀ ಸದರಿ ಮೊತ್ತಕ್ಕೆ ಬಡ್ಡಿ ಸೇರಿಸಿಕೊಡಬೇಕು. ಆದರೆ ಇವರು ನಾವು ಠೇವಣಿಯಾಗಿಟ್ಟುರುವಂತಹ ಹಣದಿಂದಲೇ ಅಷ್ಟು ಮೊತ್ತವನ್ನು ಪಡೆದಿರುವುದಕ್ಕೆ ಕಾರಣವೇನೆಂದು ಕೇಳಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ವಿಶ್ವವಿದ್ಯಾನಿಲಯವು ಎಲ್‌ಐಸಿ ಕಾರ್ಪಸ್ ಫಂಡ್‌ನಲ್ಲಿ ನಿಧಿಯನ್ನು ಇಡುವಂತಹ ಸಂದರ್ಭದಲ್ಲಿ ಯಾವ ಸ್ಕೀಂನಲ್ಲಿ ಇಟ್ಟಿರುತ್ತಾರೋ

| | |
|---|---|
| | ಅದರ ಆಧಾರದ ಮೇಲೆ ಅವರು ನಿರ್ವಹಣಾ ವೆಚ್ಚವೆಂದು ಪಡೆದಿರುತ್ತಾರೆ ಎಂದು ತಿಳಿಸುತ್ತಾ, ಸದರಿ ವಿಷಯದ ಬಗ್ಗೆ ಈಗಾಗಲೇ ಎಲ್ಐಸಿಯವರನ್ನು ಕರೆದು ಮಾತನಾಡಿ ಸ್ಕೀಂಅನ್ನು ಬದಲಾವಣೆ ಮಾಡಲಾಗಿದೆ ಎಂದು ತಿಳಿಸಿದರು.<br>ಶ್ರೀ ಮಹದೇಶು ಅವರು ಮಾತನಾಡಿ, ಬಿಎಸ್ಎನ್ಎಲ್‌ನಿಂದ 01 ಜಿಬಿಪಿಎಸ್ ಇಂಟರ್ನೆಟ್ ಬ್ಯಾಂಡ್ ವಿಡ್ತ್ ಸಂಪರ್ಕ ಸೇವೆಗೆ ರೂ. 26,10,755/-ಗಳನ್ನು ನಮೂದಿಸಿದ್ದೀರಿ. 01 ಜಿಬಿಪಿಎಸ್‌ಗೆ ರೂ. 26.00 ಲಕ್ಷ ತಗುಲುವುದೇ ಎಂದು ಕೇಳಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಬಿಎಸ್ಎನ್ಎಲ್‌ನಲ್ಲಿ ಬೇರೆ ಇಂಟರ್ನೆಟ್ ಬ್ಯಾಂಡ್‌ಗಿಂತ ಇವರಲ್ಲಿ ಬೆಲೆ ಜಾಸ್ತಿಯಿದೆ. ಆದರೆ ವಿಶ್ವವಿದ್ಯಾನಿಲಯವು ಪ್ರೈವೇಟ್‌ಗೆ ನೀಡಲು ಸಾಧ್ಯವಾಗುವುದಿಲ್ಲ. 1 gbps (National Knowledge Network) ಯನ್ನು ಸರ್ಕಾರ ಅಂದರೆ ಯುಜಿಸಿಯಿಂದ ಪಡೆಯಲೇಬೇಕಾಗಿರುತ್ತದೆ ಎಂದು ತಿಳಿಸಿದರು. ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ರೂ. 26.00 ಲಕ್ಷಗಳಿಂದ ರೂ. 18.00 ಲಕ್ಷಗಳಿಗೆ ಇಳಿಸಲಾಗಿದೆ. ಹಾಗೆಯೇ ರೂ. 18.00 ಲಕ್ಷಗಳನ್ನು ಮೂರು ಕಂತುಗಳಲ್ಲಿ ನೀಡಲಾಗುತ್ತಿದೆ ಎಂದು ತಿಳಿಸಿದರು.<br>ಶ್ರೀ ಮಹದೇಶು ಅವರು ಮಾತನಾಡಿ, ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಂಡು ರೂ.26.00 ಕೋಟಿಗಳಷ್ಟು ವಿಶ್ವವಿದ್ಯಾನಿಲಯಕ್ಕೆ ಕೊರತೆಯುಂಟಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ತಿಳಿಸಲಾಗಿದೆ ಎಂದು ತಿಳಿಸಿದರು.<br>ಹಣಕಾಸು ಅಧಿಕಾರಿಗಳು ಮಾತನಾಡಿ, ಪ್ರತಿ ವರ್ಷ ಲೆಕ್ಕಪರಿಶೋಧನಾ ಆಕ್ಷೇಪಣೆಯಲ್ಲಿ ಸದರಿ ವಿಷಯದ ಬಗ್ಗೆ ಆಕ್ಷೇಪಣೆ ಇದ್ದೇ ಇರುತ್ತದೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಈಗಾಗಲೇ ಹೆಚ್ಚುವರಿಯಾಗಿ ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವುದಕ್ಕೆ ಸರ್ಕಾರದಲ್ಲಿ ಯಾವ ಕ್ರಮವನ್ನು ತೆಗೆದುಕೊಳ್ಳಬೇಡಿ ಎಂದಿರುವುದಕ್ಕೆ ಯಾವ ಕ್ರಮವನ್ನೂ ತೆಗೆದುಕೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿದರು.<br>ಡಾ. ಎಚ್.ಎಸ್. ನಟರಾಜು ಅವರು ಮಾತನಾಡಿ ಹೆಚ್ಚುವರಿಯಾಗಿ ತೆಗೆದುಕೊಂಡಿರುವ ಬೋಧಕೇತರ ಸಿಬ್ಬಂದಿಗಳನ್ನು ತೆಗೆದುಹಾಕುವಂತೆ ತಿಳಿಸುತ್ತಾ, ಹೆಚ್ಚುವರಿಯಾಗಿರುವ ಬೋಧಕೇತರ ಸಿಬ್ಬಂದಿಗಳಿಗೆ ಗೌರವಯುತವಾದ ವೇತನವನ್ನು ನೀಡಲು ಸಾಧ್ಯವಾಗುತ್ತಿಲ್ಲ ವೆಂದು ಸಹ ತಿಳಿಸಿದರು.<br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಬೋಧಕೇತರ ಸಿಬ್ಬಂದಿಗಳಲ್ಲಿ ಸರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲದವರನ್ನು ಗುರುತಿಸಿ ಅಂತಹವರನ್ನು ಹುದ್ದೆಯಿಂದ ತೆಗೆದುಹಾಕಲು ಈಗಾಗಲೇ ಕ್ರಮತೆಗೆದುಕೊಂಡಿದ್ದೀರಿ, ಅದರಂತೆ ಮುಂದೆಯೂ ಸಹ ಇದೇ ಕ್ರಮವನ್ನು ಅನುಸರಿಸುವಂತೆ ತಿಳಿಸಿದರು. |
| **ತೀರ್ಮಾನ** | **2022-23ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಲಾಗಿರುವ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಹಾಗೂ ಸರ್ಕಾರಿ ಲೆಕ್ಕಪರಿಶೋಧಕರಿಗೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/5.16** | ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್-ಎಐಸಿಆರ್‌ಪಿ (ಡಿಎಂಆರ್‌ಎಲ್) ಯೋಜನೆಯನ್ನು ಹಾಗೂ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಸೇವೆಯನ್ನು 2025-26ನೇ ಸಾಲಿನಿಂದ ಅನುದಾನಿತ ಸಂಸ್ಥೆಯ ಮುಂದಿನ ನಿರ್ದೇಶನದವರೆಗೆ ಮುಂದುವರಿಸುವ ಬಗ್ಗೆ. |
| **ತೀರ್ಮಾನ** | **ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗದಲ್ಲಿ ಕಾರ್ಯಗತಗೊಂಡಿರುವ ಐಸಿಎಆರ್-ಎಐಸಿಆರ್‌ಪಿ (ಡಿಎಂಆರ್‌ಎಲ್) ಯೋಜನೆಯನ್ನು ಹಾಗೂ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿಗಳ ಸೇವೆಯನ್ನು 2025-26ನೇ ಸಾಲಿನಿಂದ ಅನುದಾನಿತ ಸಂಸ್ಥೆಯ ಮುಂದಿನ ನಿರ್ದೇಶನದವರೆಗೆ ಮುಂದುವರಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

| | |
|---|---|
| **ಸಾಮಾನ್ಯ ಸಭೆ 2025/5.17** | ದಿವಂಗತ ಶ್ರೀ ಶಿವಕುಮಾರ್ ಜೆ., ಪ್ರಥಮ ದರ್ಜೆ ಸಹಾಯಕ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿಶೇಷ ಘಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪತ್ನಿಯಾದ ಡಾ. ಭಾಗ್ಯಶ್ರೀ ಎನ್. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಡಾ. ಭಾಗ್ಯಶ್ರೀ ಎನ್. ಇವರಿಗೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/5.18** | Center for Geoinformatics Technology, DoS in Geography, Manasagangotri, Mysuru ಮತ್ತು Atlaspoint Tech Pvt. Ltd., Mangaluru ಇವರುಗಳ ನಡುವೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| **ತೀರ್ಮಾನ** | **Center for Geoinformatics Technology, DoS in Geography, Manasagangotri, Mysuru ಮತ್ತು Atlaspoint Tech Pvt. Ltd., Mangaluru ಇವರುಗಳ ನಡುವೆ Center for Geoinformatics Technology ವಿದ್ಯಾರ್ಥಿಗಳಗೆ Internship Opportunities, Collaborative Consulting Projects, Workshop ಹಾಗೂ ಉದ್ಯೋಗಾವಕಾಶವನ್ನು ಕಲ್ಪಿಸುವ ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/5.19** | MYCAS ಕಾಲೇಜ್ ಆಫ್ ಪ್ರೊಫೇಷನಲ್ ಸ್ಟಡೀಸ್, ಮೇಟಗಳ್ಳಿ ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಗಳ ಪುನರ್‌ರಚನೆ ಬಗ್ಗೆ-ಅನುಸಮರ್ಥನೆಗಾಗಿ. |
| **ತೀರ್ಮಾನ** | **MYCAS ಕಾಲೇಜ್ ಆಫ್ ಪ್ರೊಫೇಷನಲ್ ಸ್ಟಡೀಸ್, ಮೇಟಗಳ್ಳಿ ಮೈಸೂರು ಸಂಸ್ಥೆಗೆ Specialized Programme ಅಡಿಯಲ್ಲಿ B.Com (Hons) (Financial Management) ಕೋರ್ಸ್‌ಗಳ ಪಠ್ಯಕ್ರಮ ಮತ್ತು ರೆಗ್ಯುಲೇಷನ್‌ಗಳನ್ನು ಸಿದ್ಧಪಡಿಸುವ ಸಂಬಂಧ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಿ, ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2025/5.20** | Marian Institute of Professional Studies ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು ಸಂಸ್ಥೆಗೆ Specialized Programme ಅಡಿಯಲ್ಲಿನ ಅಧ್ಯಯನ ಮಂಡಳಿಗಳ ಪುನರ್‌ರಚನೆ ಬಗ್ಗೆ-ಅನುಸಮರ್ಥನೆಗಾಗಿ. |
| **ತೀರ್ಮಾನ** | Marian Institute of Professional Studies ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು ಸಂಸ್ಥೆಗೆ Specialized Programme ಅಡಿಯಲ್ಲಿ 1) BFA (Film Making) (UG), 2) BBA (Aviation & Logistics)(UG) ಮತ್ತು 3) M.A (Indian Christian Theology and Missiology) (PG) ಕೋರ್ಸ್‌ಗಳ ಪಠ್ಯಕ್ರಮ ಮತ್ತು ರೆಗ್ಯುಲೇಷನ್‌ಗಳನ್ನು ಸಿದ್ಧಪಡಿಸುವ ಸಂಬಂಧ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಿ, ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2025/5.21** | ಹಿಂದೂಸ್ತಾನ್ ಪ್ರಥಮ ದರ್ಜೆ ಕಾಲೇಜು, ಮೈಸೂರು, ಬಿ.ಎಸ್.ಡಿ. ಕ್ರಿಸ್ಟ, ಮೈಸೂರು, ಗುಪ್ತ ಕಾಲೇಜು ಆಫ್ ಡಿಸೈನ್, ಹೊನ್ನಲ್ಲಗೆರೆ, ಮದ್ದೂರು ತಾಲ್ಲೂಕು ಹಾಗೂ Wiztoonz Academy of Media & Design, ಬೆಳವಾಡಿ, ಶ್ರೀರಂಗಪಟ್ಟಣ ತಾಲ್ಲೂಕು ಸಂಸ್ಥೆಗಳಿಗೆ |

<table>
<tr><td></td><td>Specialized Programmeಗಳ ಅಡಿಯಲ್ಲಿನ ಅಧ್ಯಯನ ಮಂಡಳಿಗಳ ಪುನರ್‌ರಚನೆ ಬಗ್ಗೆ- ಅನುಸಮರ್ಥನೆಗಾಗಿ.</td></tr>
<tr><td>ತೀರ್ಮಾನ</td><td>Specialized Programmeಗಳ ಅಡಿಯಲ್ಲಿ ಈ ಕೆಳಕಂಡ ಸಂಸ್ಥೆಗಳಲ್ಲಿ ಪ್ರಚಲಿತದಲ್ಲಿರುವ ಕೋರ್ಸುಗಳ ಸಂಬಂಧ ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಿ, ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.
<table>
<tr><th>ಕ್ರ.ಸಂ.</th><th>ಸಂಸ್ಥೆಯ ಹೆಸರು</th><th>ಕೋರ್ಸುಗಳ ವಿವರ</th></tr>
<tr><td>1</td><td>ಹಿಂದೂಸ್ತಾನ್ ಪ್ರಥಮ ದರ್ಜೆ ಕಾಲೇಜು, ಮೈಸೂರು.</td><td>BBA (Aviation Management) (UG)</td></tr>
<tr><td>2</td><td>ಬಿ.ಎಸ್.ಡಿ. ಕ್ರಿಸ್ಟ, ಮೈಸೂರು.</td><td>B.Des (Hons.) (Architectural Design Construction) and B.Des.(Hons.) (Interaction and Experience Design)(UG)</td></tr>
<tr><td>3</td><td>ಗುಪ್ತ ಕಾಲೇಜು ಆಫ್ ಡಿಸೈನ್, ಹೊನ್ನಲ್ಲಗೆರೆ, ಮದ್ದೂರು ತಾಲ್ಲೂಕು</td><td>B.Sc.(Hons.)(Graphics, Animation & VFX) and M.Sc (Hons.) (Graphics, Animation & VFX) (CB)</td></tr>
<tr><td>4</td><td>Wiztoonz Academy of Media & Design, ಬೆಳವಾಡಿ, ಶ್ರೀರಂಗಪಟ್ಟಣ ತಾ॥</td><td>B.Sc.(Hons.) (Multimedia) and M.Sc (Multimedia Design) (CB)</td></tr>
</table></td></tr>
<tr><td>ಸಾಮಾನ್ಯ ಸಭೆ 2025/5.22</td><td>ಡಾ. ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್. ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳ ಪ್ರತಿಷ್ಠೆ ಮತ್ತು ಘನತೆಯ ಮೇಲೆ ನಿರಂತರವಾಗಿ ದೋಷಾರೋಪಣೆ ಮಾಡುತ್ತಿರುವ ಬಗ್ಗೆ.</td></tr>
<tr><td></td><td>ಡಾ. ಮಹೇಶ್ ಟಿ.ಬಿ. ರವರು ಮಾತನಾಡಿ, ಡಾ. ನಾಗರಾಜುರವರು ಬಿ.ಜಿ.ಎಸ್ ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಬಿ.ಇಡಿ ಕಾಲೇಜುಗಳ ಅಧ್ಯಾಪಕರುಗಳು, ಪ್ರಾಂಶುಪಾಲರುಗಳು ಹಾಗೂ ಸಿಂಡಿಕೇಟ್ ಸದಸ್ಯರು, ಪರೀಕ್ಷಾ ಮಂಡಳಿ ಅಧ್ಯಕ್ಷರುಗಳ ನೇಮಕ ಹಾಗೂ ಪ್ರಮುಖವಾಗಿ ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳ ಪ್ರತಿಷ್ಠೆ ಮತ್ತು ಘನತೆಯ ಮೇಲೆ ನಿರಂತರವಾಗಿ ದೋಷಾರೋಪಣೆ ಸಲ್ಲಿಸುತ್ತಿದ್ದಾರೆ ಹಾಗೂ ಹಲವಾರು ಪರೀಕ್ಷಾ ಗೌಪ್ಯತೆಯ ಮಾಹಿತಿಗಳನ್ನು ಸಹ ಮಾಹಿತಿ ಹಕ್ಕು ಕಾಯ್ದೆ 2005 ರನ್ವಯ ಕೋರುತ್ತಿರುತ್ತಾರೆ ಹಾಗೂ ಇವರಿಗೆ ಸಾಕಷ್ಟು ಬಾರಿ ತಿಳುವಳಿಕೆ ಹೇಳಿದ್ದರೂ ಸಹ ಇವರ ನಡವಳಿಕೆಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿರುವುದಿಲ್ಲ ಎಂದು ತಿಳಿಸಿದರು.<br><br>ಡಾ. ನಟರಾಜು ಹೆಚ್.ಎಸ್.ರವರು ಮಾತನಾಡಿ, ಒಬ್ಬ ಪ್ರಾಂಶುಪಾಲರು ನಮ್ಮ ಸಿಂಡಿಕೇಟ್ ಸದಸ್ಯರಿಗೆ ಕೆಟ್ಟದಾಗಿ ಮಾತನಾಡಿರುತ್ತಾರೆ. ರೂ.5,000-10,000/-ಗಳನ್ನು ನೀಡಿದರೆ ಯಾವುದೇ ರೀತಿಯ ಹೇಳಿಕೆಯನ್ನು ನೀಡುತ್ತಾರೆ. ಇವರು ಮಾತನಾಡಿರುವುದನ್ನು ನಾವು ಖಂಡಿಸುತ್ತೇವೆ ಎಂದು ತಿಳಿಸಿದರು.<br><br>ಡಾ. ನಾಗರಾಜುರವರು ನಮ್ಮ ಬಳಿ ಬಂದು ವಿಶ್ವವಿದ್ಯಾನಿಲಯದಲ್ಲಿ ಆಡಳಿತದಲ್ಲಿ ಕೆಲವು ಲೋಪಗಳಿವೆ ಎಂದು ಆಪಾದನೆ ಮಾಡಿ ನಮ್ಮಗಳಿಗೂ ಸಹ ಪತ್ರವನ್ನು ನೀಡಿರುತ್ತಾರೆ ಎಂದು ಹಲವು ಸಿಂಡಿಕೇಟ್ ಸದಸ್ಯರುಗಳು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು (ಪರೀಕ್ಷಾಂಗ) ಮಾತನಾಡಿ, ಡಾ. ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್. ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ, ಮೈಸೂರು ಇವರು ಈಗಾಗಲೇ ಮೈಸೂರು</td></tr>
</table>

| | |
|---|---|
| | ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಶಿಕ್ಷಣ ಮಂಡಳಿ ಮತ್ತು ಅಧ್ಯಯನ ಮಂಡಳಿ ಮತ್ತು ಪರೀಕ್ಷಾ ಮಂಡಳಿಯ ಸದಸ್ಯರಾಗಿ ಮತ್ತು ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ. ಜೇಷ್ಠತೆಯನುಸಾರ ಹಾಗೂ ಮಾನ್ಯ ಕುಲಪತಿಯವರ ವಿವೇಚಾನುಸಾರ ಪರೀಕ್ಷಾ ಮಂಡಳಿಗಳನ್ನು ಪುನರ್ ರಚಿಸಬಹುದಾಗಿರುತ್ತದೆ. ಪ್ರಸ್ತುತ ಬಿ.ಎಡ್. ಪರೀಕ್ಷಾ ಮಂಡಳಿಗೆ ಈ ಹಿಂದೆ ಡಾ. ಆಂಥೋನಿ ಪೌಲ್ ರಾಜ್ ಇವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಸದರಿಯವರಿಗೆ ಹಲವಾರು ಬೆದರಿಕೆಗಳನೊಡ್ಡಿ ಪರೀಕ್ಷಾ ಕಾರ್ಯಗಳು ಸುಲಲಿತವಾಗಿ ನಡೆಯದಂತೆ ತೊಂದರೆ ನೀಡಿದ್ದನ್ನು ಸದರಿಯವರು ವಿಶ್ವವಿದ್ಯಾನಿಲಯದ ಗಮನಕ್ಕೆ ತಂದು ಪರೀಕ್ಷಾ ಮಂಡಳಿಯ ಅಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಬಿ.ಎಡ್. ಪರೀಕ್ಷಾ ಮಂಡಳಿಗೆ ನೂತನವಾಗಿ ಡಾ. ಹೆಚ್.ಎಂ. ಮಹೇಶ್‌ರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರಿಂದ ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಯಾವುದಾದರೊಂದು ತೊಂದರೆಯನ್ನು ಹುಟ್ಟುಹಾಕುವ ಪ್ರವೃತ್ತಿಯುಳ್ಳ ವ್ಯಕ್ತಿಯಾಗಿರುವ ಡಾ. ನಾಗರಾಜು ಇವರು ಸಿಂಡಿಕೇಟ್ ಸದಸ್ಯರುಗಳಿಗೆ ಸಲ್ಲಿಸಿರುವ ಮನವಿಗಳಲ್ಲಿರುವ ಅಂಶಗಳು ಸತ್ಯಕ್ಕೆ ದೂರವಾಗಿದೆ. ಡಾ. ನಾಗರಾಜು ಇವರಿಂದ ವಿಶ್ವವಿದ್ಯಾನಿಲಯದಲ್ಲಿ ನಿರ್ಧಿಷ್ಟವಾದ ಕೆಲಸವನ್ನು ಮಾಡಲು ಸಾಧ್ಯವಾಗದೆ ಇರುವುದನ್ನು ಗಮನಕ್ಕೆ ತಂದರು. |
| ತೀರ್ಮಾನ | **ಡಾ. ನಾಗರಾಜು, ಪ್ರಾಂಶುಪಾಲರು, ಬಿ.ಜಿ.ಎಸ್. ಕಾಲೇಜ್ ಆಫ್ ಎಜುಕೇಷನ್, ಕುವೆಂಪುನಗರ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆಗಳ ಪ್ರತಿಷ್ಠೆ ಮತ್ತು ಘನತೆಯ ಮೇಲೆ ನಿರಂತರವಾಗಿ ದೋಷಾರೋಪಣೆ ಮಾಡುತ್ತಿರುವುದನ್ನು ಸಿಂಡಿಕೇಟ್ ಸಭೆಯು ಗಮನಿಸಿ, ಡಾ. ನಾಗರಾಜು ರವರು ಈ ಪ್ರವೃತ್ತಿಯನ್ನು ಇಲ್ಲಿಗೆ ಅಂತ್ಯಗೊಳಿಸುವಂತೆ ಸಭೆಯು ಗೌರವಯುತವಾಗಿ ಸೂಚಿಸಿ, ಆದಾಗ್ಯೂ ಒಂದು ವೇಳೆ ಅವರು ಇದೇ ಪ್ರವೃತ್ತಿಯನ್ನು ಮುಂದುವರಿಸಿದ್ದಲ್ಲಿ, ಅವರ ವಿರುದ್ಧ ನಿಯಮಾವಳಿಗಳನ್ವಯ ಶಿಸ್ತು ಕ್ರಮಕೈಗೊಳ್ಳಲು ಸಭೆಯು ಒಮ್ಮತದಿಂದ ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2025/5.23** | ದಿವಂಗತ ಶ್ರೀ ಮಹೇಶ್‌ಕುಮಾರ್ ಸಿ.ಆರ್., ಅಧೀಕ್ಷಕರು, ಯುವರಾಜ ಕಾಲೇಜು, ಮೈಸೂರು ಇವರ ಪತ್ನಿಯಾದ ಶ್ರೀಮತಿ ಉಷಾ ಆರ್. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಶ್ರೀಮತಿ ಉಷಾ ಆರ್ ಇವರಿಗೆ ಸೇವಕಿ ಹುದ್ದೆಗೆ ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/5.24** | ವಿಶ್ವವಿದ್ಯಾನಿಲಯದಲ್ಲಿ ಡಿಜಿಟಲ್ ಅಕಾಡೆಮಿಕ್ ಪ್ಲಾಟ್‌ಫಾರ್ಮ್ ಪರಿಚಯಿಸುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ತಂತ್ರಜ್ಞಾನದ ಅವಿಷ್ಕಾರದೊಂದಿಗೆ ವಿಶ್ವವಿದ್ಯಾನಿಲಯವು ಮುನ್ನಡೆಯಬೇಕಾಗಿರುವುದರಿಂದ ಶೈಕ್ಷಣಿಕ ಪ್ರಗತಿಯನ್ನು ವೃದ್ಧಿಸುವ ಹಿನ್ನೆಲೆಯಲ್ಲಿ ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲಗಳನ್ನು ಒದಗಿಸುವ ಒಂದು ಆಪ್‌ನ್ನು ಪರಿಚಯಿಸುವ ಕಾರ್ಯಕ್ರಮವಾಗಿದ್ದು, ಸದರಿ ಆಪ್ ಮೂಲಕ ವಿದ್ಯಾರ್ಥಿಗಳು ಕಲಿಕೆಗೆ ಅವಶ್ಯವಿರುವ ಯಾವುದಾದರೊಂದು ವಿಷಯಕ್ಕೆ ಸಂಬಂಧಿಸಿದ ಉತ್ತಮ ಪ್ರಾಧ್ಯಾಪಕರ ಬೋಧನೆಯನ್ನು ಆಲಿಸಲು ಅಥವಾ ವೀಕ್ಷಿಸಲು, ಕಲಿಕಾ ಸಾಮಾಗ್ರಿಗಳನ್ನು ಪಿಡಿಎಫ್ ಆವೃತ್ತಿಯಲ್ಲಿ ವಿದ್ಯಾರ್ಥಿಗಳು ವೀಕ್ಷಿಸಬಹುದು ಅಥವಾ ಅದನ್ನು ಡೌನ್‌ಲೋಡ್ ಮಾಡಿ ಅಭ್ಯಾಸ ಮಾಡಲು, ಪಠ್ಯಕ್ಕೆ ಸಂಬಂಧಿಸಿದ ಮಾದರಿ ಪತ್ರಿಕೆಗಳನ್ನು ಆಪ್ ಮೂಲಕವೇ ಒಂದೇ ಬಾರಿಗೆ ಎಲ್ಲಾ ವಿದ್ಯಾರ್ಥಿಗಳಿಗೂ ತಲುಪುವ ಒಂದು ಸಾಧನವಾಗಿರುತ್ತದೆ. ಈ ಆಪ್‌ನಿಂದ ಗ್ರಾಮಾಂತರ ಪ್ರದೇಶದಲ್ಲಿ ವ್ಯಾಸಂಗ ಮಾಡುತ್ತಿರುವ |

| | |
|---|---|
| | ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲಕರವಾಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ. ಈ ವ್ಯವಸ್ಥೆಯನ್ನು ಈಗಾಗಲೇ ಹಲವಾರು ವಿಶ್ವವಿದ್ಯಾನಿಲಯಗಳು ಅನುಷ್ಠಾನಗೊಳಿಸಿದ್ದು, ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಈ ರೀತಿಯ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ಕಲ್ಪಿಸುವ ದೃಷ್ಟಿಯಿಂದ ಈ ವಿಷಯಕ್ಕೆ ಸಂಬಂಧಿಸಿದಂತೆ ಸಭೆಯು ಅನುಮೋದನೆ ನೀಡಬೇಕೆಂದು ತಿಳಿಸಿದರು.<br><br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು ಇವರು ಮಾತನಾಡಿ, ಈಗಾಗಲೇ ಸರ್ಕಾರವು ಪ್ರಥಮ ದರ್ಜೆ ಕಾಲೇಜುಗಳಲ್ಲಿ ಈ ರೀತಿಯ ಸೌಲಭ್ಯವನ್ನು ಒದಗಿಸಿದ್ದು, ಈ ಸೌಲಭ್ಯದಿಂದ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚು ಅನುಕೂಲಕರವಾಗಿದೆ ಎಂದು ತಿಳಿಸುತ್ತಾ, ಈ ರೀತಿಯ ಸೌಲಭ್ಯವನ್ನು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಒದಗಿಸುವುದು ಶೈಕ್ಷಣಿಕ ಪ್ರಗತಿಗೆ ಉತ್ತಮ ಬೆಳವಣಿಗೆಯಾಗಿದೆಯೆಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈ ರೀತಿಯ ಸೌಲಭ್ಯವನ್ನು ವಿಶ್ವವಿದ್ಯಾನಿಲಯದಲ್ಲಿ ಒದಗಿಸುವುದರಿಂದ ಶೈಕ್ಷಣಿಕ ಪ್ರಗತಿ ವೃದ್ಧಿಸುವುದಲ್ಲದೆ ವಿಶ್ವವಿದ್ಯಾನಿಲಯದಲ್ಲಿ ಈ ರೀತಿಯ ಸೌಲಭ್ಯವನ್ನು ಅನುಷ್ಠಾನಗೊಳಿಸಿರುವುದಾಗಿ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳ ಗಮನ ಸೆಳೆಯಬಹುದೆಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗ/ಕಾಲೇಜು/ಸಂಸ್ಥೆಗಳಲ್ಲಿ ಮತ್ತು ಸ್ನಾತಕ ಪದವಿ ಘಟಕ/ಸಂಯೋಜಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯದಲ್ಲಿ ಡಿಜಿಟಲ್ ಅಕಾಡೆಮಿಕ್ ಪ್ಲಾಟ್‌ಫಾರ್ಮ್ ತೆರೆಯುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/5.25** | ಡಾ. ನಾಗರಾಜು ಎಚ್., ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಗಳಿಕೆ ರಜೆ ನಗದೀಕರಣ ಮಂಜೂರು ಮಾಡುವ ಬಗೆಗೆ. |
| **ತೀರ್ಮಾನ** | **ಡಾ. ನಾಗರಾಜು ಎಚ್., ನಿವೃತ್ತ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಗಳಿಕೆ ರಜೆ ನಗದೀಕರಣ ಮಂಜೂರು ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/5.26** | ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕ್ಯಾಂಟೀನ್‌ಗಳು, ಮಳಿಗೆಗಳು, ಪೆಟ್ರೋಲ್ ಬಂಕ್, ಬ್ಯಾಂಕ್‌ಗಳು, ಅಂಚೆ ಕಛೇರಿ ಹಾಗೂ ವಾಣಿಜ್ಯ ಸಂಕೀರ್ಣಗಳ ಬಾಡಿಗೆ ದರವನ್ನು ಪರಿಷ್ಕರಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕ್ಯಾಂಟೀನ್‌ಗಳು, ಮಳಿಗೆಗಳು ಪೆಟ್ರೋಲ್ ಬಂಕ್, ಬ್ಯಾಂಕ್‌ಗಳು, ಅಂಚೆ ಕಛೇರಿ ಹಾಗೂ ವಾಣಿಜ್ಯ ಸಂಕೀರ್ಣಗಳ ಬಾಡಿಗೆ ದರವನ್ನು ಪರಿಷ್ಕರಿಸುವ ಸಂಬಂಧ ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಕುಲಸಚಿವರು, ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆ, ಕಾರ್ಯಪಾಲಕ ಅಭಿಯಂತರರು ಮತ್ತು ಮೈಸೂರು ಮಹಾನಗರ ಪಾಲಿಕೆಯ ವಲಯ ಕಛೇರಿಯ ಆಯುಕ್ತರು ಒಳಗೊಂಡಂತೆ ಸಮಿತಿ ರಚಿಸಿ, ಸಮಿತಿಯು ಬಾಡಿಗೆ ದರಗಳನ್ನು ಪರಿಷ್ಕರಿಸಲು ತೀರ್ಮಾನಿಸಿದ್ದು, ಪರಿಷ್ಕರಣಾ ಪಟ್ಟಿಯನ್ನು ಪಿಪಿಟಿ ಮೂಲಕ ಸಭೆಯಲ್ಲಿ ಮಂಡಿಸಿದರು.<br><br>1. ಲೋಕೋಪಯೋಗಿ ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ ಬಾಡಿಗೆ ನಿಗದಿಪಡಿಸುವ ನಿಯಮವನ್ನು ಯಥಾವತ್ತಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ |

| | |
|---|---|
| | ಅಳವಡಿಸಿಕೊಂಡು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಪಾಲಕ ಅಭಿಯಂತರರೇ ಬಾಡಿಗೆ ನಿಗದಿಪಡಿಸಿರುತ್ತಾರೆ.<br>2. ಮೈಸೂರು ವಿಶ್ವವಿದ್ಯಾನಿಲಯದ ಆವರಣ ಹಾಗೂ ಮಾನಸಗಂಗೋತ್ರಿಯಲ್ಲಿರುವ ವಾಣಿಜ್ಯ ಮಳಿಗೆ, ಎಸ್.ಟಿ.ಡಿ.ಬೂತ್, ಕಟ್ಟಡಗಳು ಹಾಗೂ ಉಪಾಹಾರ ಮಂದಿರಗಳ ಹಿಂದಿನ ಕರಾರುಗಳನ್ನು ರದ್ದುಪಡಿಸಿ ಹನ್ನೊಂದು ತಿಂಗಳಿಗೆ ಮಾತ್ರ ಕರಾರು ಒಪ್ಪಂದವನ್ನು ಮಾಡಿಕೊಳ್ಳುವುದು. ಎಸ್‌ಟಿಡಿ ಬೂತ್ ನಾಮಫಲಕವನ್ನು ತೆರವುಗೊಳಿಸಿ ಮಳಿಗೆ ಸಂಖ್ಯೆ ನೀಡುವುದು.<br>3. ಈಗಾಗಲೇ ಬಾಡಿಗೆ ಬಾಕಿ ಇರುವ ಮಳಿಗೆಗಳ ಹಾಗೂ ಕ್ಯಾಂಟೀನ್ ಮಾಲೀಕರಿಂದ ಬಾಕಿ ವಸೂಲಿ ಮಾಡುವ ಸಂಬಂಧ ನೋಟಿಸ್ ಜಾರಿ ಮಾಡಿ ಸೂಕ್ತ ಕಾನೂನು ಕ್ರಮವನ್ನು ತೆಗೆದುಕೊಳ್ಳುವುದು.<br>4. ಕಟ್ಟಡ ಹಾಗೂ ಮಳಿಗೆಗಳಿಗೆ ಮಾತ್ರ ಬಾಡಿಗೆ ನಿಗದಿಪಡಿಸಿದ್ದು, ಸದರಿ ಕಟ್ಟಡ ಹಾಗೂ ಮಳಿಗೆಗಳ ಬಾಡಿಗೆದಾರರು ಹಾಗೂ ಗುತ್ತಿಗೆದಾರರು ವಾಹನ ನಿಲುಗಡೆಗಾಗಿ ಹೆಚ್ಚಿನ ಜಾಗವನ್ನು ಆಕ್ರಮಿಸಿಕೊಂಡಿರುವುದರಿಂದ ಹಾಗೂ ಶೆಡ್ ಕಟ್ಟಿರುವ ಜಾಗಕ್ಕೂ ಸಹ ಬಾಡಿಗೆ ನಿಗದಿಪಡಿಸುವುದು.<br>5. ಖಾಲಿ ಮಾಡಿರುವ ಮಳಿಗೆಗಳಿಗೆ ಟೆಂಡರ್/ಬಹಿರಂಗ ಹರಾಜು ಅಧಿಸೂಚನೆಯನ್ನು ಹೊರಡಿಸುವುದು.<br>6. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಬೆಂಗಳೂರಿನಲ್ಲಿರುವ ಸ್ವತ್ತಿಗೆ ಸಂಬಂಧಿಸಿದಂತೆ ಶ್ರೀಮತಿ ಉಮಾದೇವಿಯವರಿಗೆ The Karnakata Public Premises (Eviction of Unauthorised Occupants) Act ಅಡಿಯಲ್ಲಿ ಸದರಿಯವರಿಗೆ ನೋಟಿಸ್‌ನ್ನು ಖುದ್ದಾಗಿ ಕಾರ್ಯಪಾಲಕ ಅಭಿಯಂತರರು ಮುದ್ದಾಂ ಮೂಲಕ ಜಾರಿ ಮಾಡಲು ಸೂಚಿಸಲಾಗಿದೆ ಎಂದು ತಿಳಿಸಿದರು.<br>ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಟೆಂಡರ್ ಆಹ್ವಾನಿಸುವ ಸಂದರ್ಭದಲ್ಲಿ ಆಂದೋಲನ ಮತ್ತು ಮೈಸೂರು ಮಿತ್ರ ಪತ್ರಿಕೆಗಳಲ್ಲಿಯೂ ಸಹ ಪ್ರಕಟಣೆ ನೀಡುವಂತೆ ಸಲಹೆ ನೀಡಿದರು. ಮುಂದುವರೆದು, ಟೆಂಡರ್ ಆಹ್ವಾನಿಸಿ ತೆಗೆದುಕೊಂಡ ವರದಿಯನ್ನು ಮುಂದಿನ ಮೂರು ತಿಂಗಳಲ್ಲಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವಂತೆ ತಿಳಿಸಿದರು.<br>ಶ್ರೀ ಮಹದೇಶುರವರು ಮಾತನಾಡಿ, ಬಾಡಿಗೆ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆಯೆಂದು ಕೇಳಿದರು.<br>ಕುಲಸಚಿವರು ಮಾತನಾಡಿ, ಬಾಡಿಗೆ ಬಾಕಿ ಉಳಿಸಿಕೊಂಡಿರುವವರಿಗೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕ್ಯಾಂಟೀನ್‌ಗಳು, ಮಳಿಗೆಗಳು, ಪೆಟ್ರೋಲ್ ಬಂಕ್, ಬ್ಯಾಂಕ್‌ಗಳು, ಅಂಚೆ ಕಛೇರಿ ಹಾಗೂ ವಾಣಿಜ್ಯ ಸಂಕೀರ್ಣಗಳ ಬಾಡಿಗೆ ದರವನ್ನು ಪರಿಷ್ಕರಿಸುವ ಸಂಬಂಧ ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದಂತಹ ಸಮಿತಿಯು ನೀಡಿರುವ ವರದಿಯನ್ನು ಅಂಗೀಕರಿಸಿ ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮವಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.**<br>**ಮುಂದುವರೆದು, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಈಗಾಗಲೇ ಖಾಲಿ ಇರುವ / ಅವಧಿ ಮುಗಿದಿರುವ ಎಲ್ಲಾ ಮಳಿಗೆಗಳನ್ನು ಇ-ಟೆಂಡರ್/ಬಹಿರಂಗ ಹರಾಜು ಪ್ರಕಟಣೆಗಳನ್ನು ತುರ್ತು** |

| | |
|---|---|
| | **ಹೊರಡಿಸಲು ಹಾಗೂ ಟೆಂಡರ್ ಅವಧಿ ಮುಗಿದಿದ್ದು, ಮಳಿಗೆಗಳನ್ನು ಖಾಲಿ ಮಾಡದೆ ಇರುವವರನ್ನು ಕರ್ನಾಟಕ ಸಾರ್ವಜನಿಕ ಆವರಣ (ಅನಧಿಕೃತ ನಿವಾಸಿಗಳ ಹೊರಹಾಕುವಿಕೆ) ಕಾಯ್ದೆ 1974 (The Karnataka Public Premises (Eviction of Unauthorised Occupants) ರಡಿಯಲ್ಲಿ ತುರ್ತಾಗಿ ಕ್ರಮವಹಿಸಲು ಕಾರ್ಯಪಾಲಕ ಅಭಿಯಂತರರು (ಪ್ರಭಾರ) & ಇಂಜಿನಿಯರಿಂಗ್ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡುವಂತೆ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು.** |

**ಇತರೆ ವಿಷಯಗಳು:**

1. ಮಾನ್ಯ ಕುಲಪತಿಯವರು ಮಾತನಾಡಿ, ಮಾನಸಗಂಗೋತ್ರಿಯ ಆವರಣದಲ್ಲಿರುವ ರೌಂಡ್ ಕ್ಯಾಂಟಿನ್ ಹಿಂಭಾಗದ ಜಾಗದಲ್ಲಿ ಕಿಂಗ್ಸ್ ಕೆಫೆರವರು ಬಾಡಿಗೆಗೆ ನೀಡುವಂತೆ ಕೇಳುತ್ತಿದ್ದಾರೆಂದು ಸಭೆಯ ಗಮನಕ್ಕೆ ತಂದರು.

   ಶ್ರೀ ಕೆ.ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈ ಸಂಬಂಧ ಟೆಂಡರ್ ಆಹ್ವಾನಿಸುವಂತೆ ತಿಳಿಸಿದರು.

2. ಡಾ. ನಟರಾಜ್ ಹೆಚ್ ಎಸ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಈಜುಕೊಳವನ್ನು ಖಾಸಗೀಕರಣಗೊಳಿಸಬೇಡಿ ಎಂದು ತಿಳಿಸಿದರು.

   ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಈಜುಕೊಳವನ್ನು ಖಾಸಗೀಕರಣ ಗೊಳಿಸುವುದಿಲ್ಲ. 2023-24, 2024-25 ಹಾಗೂ 2025-26ನೇ ಸಾಲಿನ ಆಯವ್ಯಯ ವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಕೂಲಂಕಷವಾಗಿ ತಿಳಿಸಲಾಗುವುದೆಂದರು.

3. ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಪಿಎಚ್.ಡಿ ಸಂಶೋಧನೆಗೆ ಸಂಬಂಧಿಸಿದಂತೆ ಕೆಲವು ಸ್ನಾತಕ ಅಧ್ಯಾಪಕರುಗಳು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸಲು ನಿರಾಸಕ್ತಿ ವಹಿಸಿರುವ ಅಧ್ಯಾಪಕರಿಗೆ ಒಂದು ವಾರ್ಷಿಕ ವೇತನ ಬಡ್ತಿಯನ್ನು ಕಡಿತಗೊಳಿಸಲು ಕ್ರಮವಹಿಸುವುದಾಗಿ ತಿಳಿಸಿದರು. ಈ ಸಂಬಂಧ ಎಲ್ಲಾ ಸದಸ್ಯರು ಸಮ್ಮತಿ ಸೂಚಿಸಿದರು.

4. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ದಿನಾಂಕ: 19.08.2025ರಂದು ನಡೆದ ರಾಜ್ಯ ಸಂಪುಟದಲ್ಲಿ ಒಳಮೀಸಲಾತಿ ಸಂಬಂಧ ತೀರ್ಮಾನವಾಗಿದ್ದು, ಆದಷ್ಟು ಬೇಗ ಬ್ಯಾಕ್‌ಲಾಗ್ ಹುದ್ದೆಯನ್ನು ಭರ್ತಿ ಮಾಡಬೇಕಾಗಿ ಮನವಿ ಮಾಡಿಕೊಂಡರು.

   ಕುಲಸಚಿವರು ಮಾತನಾಡಿ, ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವುದಕ್ಕೆ ವಿಶ್ವವಿದ್ಯಾನಿಲಯ ಸಿದ್ಧವಾಗಿದೆ ಎಂದು ತಿಳಿಸಿದರು.

   ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಬ್ಯಾಕ್‌ಲಾಗ್ ಮತ್ತು ಜನರಲ್ ಹುದ್ದೆಗಳು ಮಾನ್ಯ ಕುಲಪತಿಗಳ ಅವಧಿಯಲ್ಲಿ ನಿರ್ವಹಿಸಬೇಕೆಂದು ಕೋರಿದರು.

   ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರದ ಅನುಮತಿ ದೊರಕಿದ ನಂತರ ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

5. ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಡಾ: ಬಿ.ಆರ್.ಅಂಬೇಡ್ಕರ್ ಅಧ್ಯಯನ ಕೇಂದ್ರದ ನಾಲ್ಕು ವಿದ್ಯಾರ್ಥಿಗಳಿಗೆ ಪಿಎಚ್.ಡಿ ಮಾರ್ಗದರ್ಶಕರನ್ನು ನೇಮಿಸಲು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪ್ರೊ. ಗೋವಿಂದರಾಜು ಹಾಗೂ ಪ್ರೊ. ದಿವಾಕರ್ ಚಾಂಡಿರವರು ಒಪ್ಪಿದಲ್ಲಿ ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದರು.

6. ಶ್ರೀ ಮಹದೇಶು ಹಾಗೂ ಡಾ. ಟಿ.ಆರ್. ಚಂದ್ರಶೇಖರ್ ಅವರುಗಳು ಮಾತನಾಡಿ, ಪ್ರೊ. ಚಂದ್ರಶೇಖರ್‌ರವರನ್ನು ಅಭಿವೃದ್ಧಿ ಅಧ್ಯಯನ ಸಂಸ್ಥೆಯ ವಿಭಾಗದ ನಿರ್ದೇಶಕರಾಗಿ ನಿಯೋಜಿಸಬೇಕೆಂದು ತಿಳಿಸಿದರು.

7. ಡಾ. ನಟರಾಜು .ಹೆಚ್.ಎಸ್.ರವರು ಮಾತನಾಡಿ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕಟ್ಟಡಗಳು ಇರಬೇಕು. ಎಲ್ಲೆಲ್ಲಿ ಕಟ್ಟಡಗಳು ಬಳಕೆಯಾಗುತ್ತಿಲ್ಲವೋ ಅಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕೆ ಕಟ್ಟಡವನ್ನು ಬಳಸಿಕೊಳ್ಳಬೇಕು. ಫಾರ್ಮಸಿ ಕಾಲೇಜಿನ ಕಟ್ಟಡವನ್ನು ಬಳಕೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುವುದು ಒಳ್ಳೆಯದು. ಏಕೆಂದರೆ ಹೊಸ ಕಟ್ಟಡವನ್ನು ಕಟ್ಟುವ ಬದಲು ಇರುವ ಕಟ್ಟಡಗಳಲ್ಲಿಯೇ ವಿದ್ಯಾರ್ಥಿಗಳ ಅನುಕೂಲಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡುವಂತೆ ತಿಳಿಸಿದರು.

8. ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಇಎಂಆರ್‌ಸಿ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡಲು ಯಾವ ಕ್ರಮವನ್ನು ಕೈಗೊಂಡಿದ್ದೀರಿ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಇಎಂಆರ್‌ಸಿ ನಿರ್ದೇಶಕರ ಹುದ್ದೆಯನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

9. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಪಿಎಂಇಬಿ ಹಾಗೂ ಕಾನೂನು ಶಾಲೆಯ ನಿರ್ದೇಶಕರ ಹುದ್ದೆಯನ್ನು ಸಹ ಭರ್ತಿ ಮಾಡಬೇಕೆಂದು ತಿಳಿಸಿದರು..

ಮಾನ್ಯ ಕುಲಪತಿಯವರು ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

10. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈಜುಕೊಳ/ಇತರೆ ಕ್ರೀಡಾ ಮೈದಾನದ ಮುಂಭಾಗದ ನಾಮಫಲಕದಲ್ಲಿ ಸಮಸ್ಯೆ/ದೂರುಗಳೇನಾದರೂ ಇದ್ದಲ್ಲಿ ಕುಲಸಚಿವರ ಕಛೇರಿಯ ದೂರವಾಣಿಗೆ ಸಂಪರ್ಕಿಸುವಂತೆ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕೆಂದು ತಿಳಿಸಿದರು.

11. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಮೂಲಭೂತ ಸೌಕರ್ಯಗಳ ಕುರಿತಾಗಿ ಪ್ರತಿ ಬಾರಿಯೂ ದೂರುಗಳು ಕೇಳಿಬರುತ್ತಿದೆ. ಬಗೆಹರಿಸಲಾಗದಷ್ಟು ಸಮಸ್ಯೆ ಇದ್ದರೂ ಕೂಡ ಸಾಮಾನ್ಯವಾಗಿ ಪರಿಹರಿಸುವ ಪ್ರಯತ್ನವನ್ನಾದರೂ ಮಾಡುವುದು ಒಳ್ಳೆಯದು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕಾರ್ಯಪಾಲಕ ಅಭಿಯಂತರರ ಕಛೇರಿಯ ಕಾರ್ಯಕ್ಷಮತೆ ಕುಗ್ಗಿರುವುದು ಇದಕ್ಕೆ ಕಾರಣವಾಗಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿದ್ಯಾರ್ಥಿಗಳಿಂದ ಸಂಗ್ರಹವಾಗಿರುವ ಹಣದಲ್ಲಿ ವಿಶ್ವವಿದ್ಯಾನಿಲಯದಿಂದ ಟೆಂಡರ್ ಕರೆದು ಮೂಲಭೂತ ಸೌಕರ್ಯಕ್ಕೆ ಅವಕಾಶ ಮಾಡಿಕೊಡಲಾಗುವುದೆಂದು ತಿಳಿಸಿದರು.

13. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಿಎಸ್‌ಆರ್ ಅನುದಾನವನ್ನು ತರುವಂತೆ ಮಾನ್ಯ ಕುಲಪತಿಯವರಲ್ಲಿ ಕೋರಿದರು.

14. ಡಾ. ಹೆಚ್.ಸಿ. ದೇವರಾಜೇಗೌಡರವರ ವಿಚಾರಣೆಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮವೇನೆಂದು ಸದಸ್ಯರುಗಳು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ನಿವೃತ್ತ ನ್ಯಾಯಾಧೀಶರು ವಿಚಾರಣೆಯನ್ನು ಮುಕ್ತಾಯಗೊಳಿಸಿದ್ದು ವರದಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸುತ್ತಾ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದಾಗಿ ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಡಾ. ಹೆಚ್.ಸಿ. ದೇವರಾಜೇಗೌಡರ ಹಣಕಾಸಿನ ದುರ್ಬಳಕೆ ಸಂಬಂಧ ಮಾಹಿತಿ ತಿಳಿಸುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಡಾ. ಹೆಚ್.ಸಿ. ದೇವರಾಜೇಗೌಡರ ವಿರುದ್ಧ ಹಣಕಾಸಿನ ದುರ್ಬಳಕೆ ಬಗ್ಗೆ ಯಾವುದೇ ವಿಚಾರಣೆ ನಡೆದಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಸುಮಾರು ಮೂರು ಕೋಟಿಯಷ್ಟು ಹಣ ದುರ್ಬಳಕೆಯಾಗಿದೆ ಎಂಬ ಸುದ್ದಿ ಇದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಬಾಕಿ ಇರುವ ಪ್ರಕರಣಗಳ ವಿಚಾರಣೆ ಮಾತ್ರ ತೆಗೆದುಕೊಂಡಿದ್ದೇವೆ. ಡಾ. ಹೆಚ್.ಸಿ. ದೇವರಾಜೇಗೌಡರವರ ವಿರುದ್ಧ ವಿಚಾರಣೆಯನ್ನು ನಡೆಸಲಾಗಿದೆಯೆಂದು ತಿಳಿಸಿದರು.

ಹಣಕಾಸು ಅಧಿಕಾರಿಯವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಮೂರು ಆರ್ಥಿಕ ವರ್ಷಗಳ ಹಣಕಾಸಿನ ಸಂಬಂಧ ಲೆಕ್ಕಪರಿಶೋಧನೆ ನಡೆದಿರುವುದಿಲ್ಲ, ವಿಶೇಷ ಲೆಕ್ಕಪರಿಶೋಧನಾ ಕಾರ್ಯ ನಡೆಸಿಕೊಡಬೇಕಾಗಿ ತಿಳಿಸಲಾಗಿದೆ. ವಿಶೇಷ ಲೆಕ್ಕಪರಿಶೋಧನಾ ಕಾರ್ಯ ಪೂರ್ಣಗೊಂಡ ನಂತರವೇ ಇದರ ಬಗ್ಗೆ ಮಾಹಿತಿ ಲಭ್ಯವಾಗುವುದು ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಶ್ರೀ ಶಿವಕುಮಾರ್‌ರವರು ಆತ್ಮಹತ್ಯೆ ಮಾಡಿಕೊಳ್ಳುವ ಮೊದಲೇ ಸಿಂಡಿಕೇಟ್ ಸದಸ್ಯರು ಹಣ ದುರ್ಬಳಕೆ ಕುರಿತಾಗಿ ಮಾಹಿತಿ ನೀಡಿರುತ್ತೇವೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈ ಸಂಬಂಧ ಒಂದು ಸಮಿತಿ ರಚಿಸಲಾಗಿರುತ್ತದೆ. ಸಮಿತಿಯವರಿಗೆ ಯುವರಾಜ ಕಾಲೇಜಿನವರು ದಾಖಲೆಗಳನ್ನು ನೀಡಿರುವುದಿಲ್ಲ, ಈ ಸಂಬಂಧ

ಸರ್ಕಾರದ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಲು ತಿಳಿಸಲಾಗಿತ್ತು, ಇಲ್ಲಿಯವರೆಗೂ ಲೆಕ್ಕಪರಿಶೋಧನೆ ಕಾರ್ಯ ಕೈಗೊಂಡಿರುವುದಿಲ್ಲ, ಪ್ರಸ್ತುತ ಯುವರಾಜ ಕಾಲೇಜಿನ ಲೆಕ್ಕಪರಿಶೋಧನೆ ಮಾಡುವುದಕ್ಕೆ ಒಪ್ಪಿರುತ್ತಾರೆ, ಲೆಕ್ಕಪರಿಶೋಧನೆ ಕಾರ್ಯ ಪೂರ್ಣಗೊಂಡರೆ ವಿಶ್ವವಿದ್ಯಾನಿಲಯ ಸೂಕ್ತ ಕ್ರಮಕೈಗೊಳ್ಳುವುದಕ್ಕೆ ಸಾಧ್ಯ ಎಂದು ತಿಳಿಸಿದರು.

ಹಣಕಾಸು ಅಧಿಕಾರಿಯವರು ಮಾತನಾಡಿ, ಯುವರಾಜ ಕಾಲೇಜಿನಲ್ಲಿ ಹಣಕಾಸಿನ ಸಂಬಂಧ ದಾಖಲೆಗಳು ಇಲ್ಲವಾಗಿರುವುದು ಗಮನಿಸಲಾಗಿದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಯುವರಾಜ ಕಾಲೇಜಿನ ಚೆಕ್‌ನಲ್ಲಿ ಹಣ ಪಡೆಯಲಾಗಿದೆ. ಶ್ರೀ ಶಿವಕುಮಾರ್‌ರವರ ಖಾತೆಗೆ ವಿದ್ಯಾರ್ಥಿಗಳಿಂದ ಹಣ ಜಮಾವಾಗಿರುತ್ತದೆ. ಆದರೆ ಚೆಕ್‌ಗೆ ಡಾ. ಹೆಚ್.ಸಿ. ದೇವರಾಜೇಗೌಡರು ಸಹಿ ಮಾಡಿರುತ್ತಾರೆ, ಇದರ ಸಂಪೂರ್ಣ ದಾಖಲೆ ನೀಡುವುದಾಗಿ ತಿಳಿಸಿದರು. ವಿಶ್ವವಿದ್ಯಾನಿಲಯದ ಅನುಮತಿ ಮೇರೆಗೆ ಯುವರಾಜ ಕಾಲೇಜಿನ ಹಣ ದುರುಪಯೋಗದ ಕುರಿತಾಗಿ ದೂರು ದಾಖಲಿಸುವುದಾಗಿ ತಿಳಿಸಿದರು,

ಸುಮಾರು 3 ರಿಂದ 3.5 ಕೋಟಿ ಹಣ ವಿದ್ಯಾರ್ಥಿಗಳ ಹಣವಾಗಿರುತ್ತದೆ. ಸದರಿ ಹಣವು ದುರ್ಬಳಕೆಯಾಗಿದ್ದು, ಇದರ ವಿರುದ್ಧ ಯಾವುದೇ ವಿಚಾರಣೆ ನಡೆಯುತ್ತಿಲ್ಲ. ಇದಕ್ಕೆ ಕಾರಣವಾದರೂ ಏನು ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸಮಿತಿ ಭೇಟಿ ನೀಡಿದ ಸಂದರ್ಭದಲ್ಲಿ ದಾಖಲೆಯನ್ನು ನೀಡಿರುವುದಿಲ್ಲ ಎಂದು ಸಮಿತಿ ತಿಳಿಸಿರುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ದಾಖಲೆ ನೀಡದಿರುವವರ ವಿರುದ್ಧ ಕ್ರಮಕೈಗೊಳ್ಳಿ ಎಂದು ತಿಳಿಸುತ್ತಾ, ಪ್ರಸ್ತುತ ಹಣ ದುರ್ಬಳಕೆಯಾಗಿರುವುದರ ವಿಷಯದ ಮೇಲೆ ಮಾನ್ಯ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಾರಣೆ ನಡೆಯುತ್ತಿದೆಯಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀ ಶಿವಕುಮಾರ್‌ರವರು ಹಣದುರ್ಬಳಕೆಯ ಕುರಿತಾಗಿ ಸಮಿತಿ ಹೋಗಿರುತ್ತದೆ. ಇದೇ ಸಂದರ್ಭದಲ್ಲಿ ಶ್ರೀ ಶಿವಕುಮಾರ್ ಆತ್ಮಹತ್ಯೆ ಮಾಡಿಕೊಂಡರು. ಈ ವಿಚಾರವಾಗಿ ಮಾನ್ಯ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಆತ್ಮಹತ್ಯೆ ಪ್ರಕರಣ ವಿಚಾರಣೆ ಜಾರಿಗೆ ಬಂದಿರುತ್ತದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ವಿಶ್ವವಿದ್ಯಾನಿಲಯದ ಹಣ ದುರ್ಬಳಕೆಯಾಗಿದ್ದು ಹಣಕಾಸು ಅಧಿಕಾರಿಗಳು ಕ್ರಮವಹಿಸದೆ ಇರುವುದು ಸರಿಯಾದ ರೀತಿಯಾಗಿರುವುದಿಲ್ಲ. ನಮ್ಮಲ್ಲಿ ಇದಕ್ಕೆ ಸಂಬಂಧಿಸಿದಂತೆ ಹಲವಾರು ದಾಖಲೆಗಳು ಇರುತ್ತದೆ. ಶ್ರೀ ಶಿವಕುಮಾರ್‌ರವರು ಮೃತ ಹೊಂದಿ ಇಷ್ಟು ದಿನಗಳಾದರೂ ಇದರ ಬಗ್ಗೆ ಕ್ರಮಕೈಗೊಂಡಿರುವುದಿಲ್ಲ ಎಂದರೆ ಯಾರು ಇದಕ್ಕೆ ಜವಾಬ್ದಾರರು ಎಂದು ತಿಳಿಸಿದರು.

ಹಣಕಾಸು ಅಧಿಕಾರಿಯವರು ಮಾತನಾಡಿ, ಹಣ ದುರ್ಬಳಕೆಯಾಗಿರುವ ವಿಚಾರವಾಗಿ ಲೆಕ್ಕಪರಿಶೋಧನೆ ಮಾಡಲೇಬೇಕು. ಇಲ್ಲವಾದರೆ ಕ್ರಮಕೈಗೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ತಿಳಿಸಿದರು.

ಸಿಂಡಿಕೇಟಿನ ಸದಸ್ಯರುಗಳೆಲ್ಲರು ಮಾತನಾಡಿ, ಯುವರಾಜ ಕಾಲೇಜಿನ ಲೆಕ್ಕಪರಿಶೋಧನೆ ನಡೆಸಿಲ್ಲವೆಂದರೆ ಇದಕ್ಕೆ ಯಾರು ಹೊಣೆ ಎಂದು ಕೇಳಿದರು.

ಶ್ರೀ ಮಹದೇಶುರವರು ಮಾತನಾಡಿ, ಇದರ ಬಗ್ಗೆ ವಿಚಾರಣೆಯಾಗಲೇಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ದಿವಂಗತ ಶ್ರೀ ಶಿವಕುಮಾರ್‌ರವರು ವಿರುದ್ಧ ಕೇಳಬಂದಿರುವ ಹಣಕಾಸು ದುರುಪಯೋಗದ ಸಂಬಂಧ ಒಂದು ಸಮಿತಿ ರಚಿಸಬಹುದು ಅಥವಾ ಚಾರ್ಟರ್ಡ್ ಅಕೌಂಟೆಂಟ್ ಅವರನ್ನು ನೇಮಿಸಿ ಮೂರು ವರ್ಷದ ಲೆಕ್ಕಪರಿಶೋಧನೆ ಮಾಡಿಸಬಹುದು ಎಂದು ಸಲಹೆ ನೀಡಿದರು.

**ತೀರ್ಮಾನ : ಯುವರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದ ಡಾ. ದೇವರಾಜೇಗೌಡ ಹಾಗೂ ದಿವಂಗತ ಶ್ರೀ ಜೆ. ಶಿವಕುಮಾರ್ ರವರುಗಳು ಯುವರಾಜ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಸಂದರ್ಭದಲ್ಲಿ ನಡೆದಿರುವ ಹಣ ದುರುಪಯೋಗದ ಬಗ್ಗೆ ಲೆಕ್ಕಪರಿಶೋಧನೆಯನ್ನು ಮಾಡಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

15. ಡಾ. ಹೆಚ್.ಎಸ್. ನಟರಾಜುರವರು ಮಾತನಾಡಿ, ಪ್ರೊ. ಬಿ.ಎಸ್. ವಿಶ್ವನಾಥ್ ಅವರಿಗೂ ಪಿಂಚಣಿಯ ಸೌಲಭ್ಯಗಳನ್ನು ಕೊಡದೆಯಿರುವುದು ತಪ್ಪಾಗುತ್ತದೆ. ಪ್ರೊ. ಬಿ.ಎಸ್. ವಿಶ್ವನಾಥ್ ಅವರ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ವಿಶ್ವವಿದ್ಯಾನಿಲಯದಿಂದ ದೊರಕಬಹುದಾ ದಂತಹ ಎಲ್ಲಾ ಸೌಲಭ್ಯಗಳನ್ನು ನೀಡುವಂತೆ ಕೇಳಿದರು. ಜೊತೆಗೆ ಪ್ರೊ. ಕೆ.ಎಸ್. ರಂಗಪ್ಪ, ವಿಶ್ರಾಂತ ಕುಲಪತಿಗಳಿಗೆ ಎಲ್ಲಾ ಸೌಲಭ್ಯಗಳನ್ನು ನೀಡಿರುವುದರಿಂದ, ಪ್ರೊ. ಬಿ.ಎಸ್. ವಿಶ್ವನಾಥ್ ಅವರಿಗೂ ಪಿಂಚಣಿ ಸೌಲಭ್ಯಗಳನ್ನು ನೀಡಬಹುದೆಂದು ಎಂದು ತಿಳಿಸಿದರು. ಪ್ರೊ. ವಿಶ್ವನಾಥ್ ಅವರು ಸದರಿ ವಿಷಯದ ಬಗೆಗೆ ತಮ್ಮಲ್ಲಿ ಹಲವು ಬಾರಿ ಮನವಿಯನ್ನು ಸಲ್ಲಿಸಿದ್ದು, ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೂ ಸಹ ಮನವಿಯನ್ನು ಸಲ್ಲಿಸಿರುತ್ತಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಬಿ.ಎಸ್. ವಿಶ್ವನಾಥ್ ಅವರ ಪಿಂಚಣಿ ಸೌಲಭ್ಯಗಳನ್ನು ನೀಡುವ ಸಂಬಂಧ ಕಾನೂನಿನಲ್ಲಿ ಅವರ ವಿರುದ್ಧವಾಗಿ ವರದಿಯನ್ನು ನೀಡುತ್ತಿದ್ದಾರೆ. 2022ರಲ್ಲಿ ನಡೆದಂತಹ ಸಿಂಡಿಕೇಟ್ ಸಭೆಯಲ್ಲಿ ಪ್ರೊ. ಬಿ.ಎಸ್. ವಿಶ್ವನಾಥ್ ರವರಿಗೆ ಪಿಂಚಣಿ ಸೌಲಭ್ಯವನ್ನು ನೀಡಬಹುದೆಂದು ತೀರ್ಮಾನಿಸಿದ್ದಾಗ್ಯೂ ಹಣಕಾಸು ವಿಭಾಗದವರು ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ಇದುವರೆಗೂ ಸದರಿ ವಿಷಯವಾಗಿ ಕಡತವು ಬಂದಿರುವುದಿಲ್ಲವೆಂದು ತಿಳಿಸಿದರು.

ಡಾ. ಹೆಚ್.ಎಸ್. ನಟರಾಜ್ ರವರು ಮಾತನಾಡಿ, ಪ್ರೊ. ಬಿ.ಎಸ್. ವಿಶ್ವನಾಥ್ ಅವರು ನಿವೃತ್ತಿ ಹೊಂದಿರುವುದರಿಂದ ಅವರು ಕಾನೂನಾತ್ಮಕವಾಗಿ ಯಾವುದೇ ಕ್ರಮವನ್ನು ತೆಗೆದುಕೊಳ್ಳದಂತೆ, ಅವರಿಗೆ ಸಲ್ಲಬೇಕಾದ ಎಲ್ಲಾ ಸೌಲಭ್ಯಗಳನ್ನು ನೀಡಬೇಕೆಂದು ಮತ್ತೊಮ್ಮೆ ಸಭೆಗೆ ತಿಳಿಸಿದರು.

**ತೀರ್ಮಾನ : ಪ್ರೊ. ಬಿ.ಎಸ್. ವಿಶ್ವನಾಥ್, ನಿವೃತ್ತ ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವಿಷಯಕ್ಕೆ ಸಂಬಂಧಿಸಿದಂತೆ 2022ರಲ್ಲಿ ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಕ್ರಮವಹಿಸಬೇಕೆಂದು ಸಿಂಡಿಕೇಟ್ ಸದಸ್ಯರುಗಳು ತಿಳಿಸಿದರು.**

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಗೌರವಾನ್ವಿತ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ** **ಕುಲಪತಿಗಳು ಹಾಗೂ ಅಧ್ಯಕ್ಷರು**